# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY
ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026
ಸಂಪುಟ:03 • ಸಂಚಿಕೆ: 03 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 24.06.2025 • ಮಂಗಳವಾರ • ಪುಟ:04 • ಬೆಲೆ:2
Volume:03 • Issue: 03 • PRGI No:KARKAN/2023/88055 • VIJAYANAGARA • 24.06.2025 • Tuesday • Page:04 • Rs:2

Grow with Us, Advertise in Hampi Times
Print & Digital Media
"Looking to bring your sales and services to readers Fingertips? HAMPI TIMES is the ideal platform"

Call:9448633038/email:hampitimes@gmail.com

ಮೈಕ್ರೋ ನ್ಯೂಸ್

## ಮುಂಗಾರು ಹಂಗಾಮಿಗೆ ನೀರು : ಜೂ. 27 ರಂದು ನೀರಾವರಿ ಸಲಹಾ ಸಮಿತಿ ಸಭೆ

**ಹಂಪಿ ಟೈಮ್ಸ್ ಕೊಪ್ಪಳ**

2025–26ನೇ ಸಾಲಿನ ತುಂಗಭದ್ರಾ ಜಲಾಶಯದ ಮುಂಗಾರು ಹಂಗಾಮಿಗೆ ಲಭ್ಯವಿರುವ ನೀರನ್ನು ಒದಗಿಸುವ ಕುರಿತು ನಿರ್ಣಯಿಸಲು ನೀರಾವರಿ ಸಲಹಾ ಸಮಿತಿ ಅಧ್ಯಕ್ಷರು ಆಗಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರು ಉಪಸ್ಥಿತಿಯಲ್ಲಿ 124ನೇ ತುರ್ತು ನೀರಾವರಿ ಸಲಹಾ ಸಮಿತಿ ಸಭೆಯನ್ನು ಜೂನ್ 27 ರಂದು ಅಪರಾಹ್ನ 3 ಗಂಟೆಗೆ ಬೆಂಗಳೂರು ವಿಧಾನಸೌಧದ 3ನೇ ಮಹಡಿಯ ಕೊಠಡಿ ಸಂಖ್ಯೆ: 334, ಸಮ್ಮೇಳನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕೊಪ್ಪಳ, ವಿಜಯನಗರ, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳ ಸಚಿವರುಗಳು, ಲೋಕಸಭಾ, ವಿಧಾನಸಭಾ, ವಿಧಾನ ಪರಿಷತ್ ಮತ್ತು ರಾಜ್ಯಸಭಾ ಸದಸ್ಯರುಗಳು ಹಾಗೂ ನೀರಾವರಿ ಸಲಹಾ ಸಮಿತಿಯ ಸದಸ್ಯರುಗಳು ಈ ಸಭೆಗೆ ಆಗಮಿಸಿ ತಮ್ಮ ಸಲಹೆ, ಸೂಚನೆಗಳನ್ನು ನೀಡಬೇಕು ಎಂದು ತುಂಗಭದ್ರಾ ಯೋಜನಾ ವೃತ್ತ ಮುನಿರಾಬಾದ್‌ನ ಅಧೀಕ್ಷಕ ಅಭಿಯಂತರರು ಹಾಗೂ ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಸ್ತೆಯ ಗುಂಡಿಗಳನ್ನು ಮುಚ್ಚಿಸಿ ಅವಘಡಗಳನ್ನು ತಪ್ಪಿಸಿ, ಜೀವ ಉಳಿಸಿ

## ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ರಸ್ತೆಗಳ ಮೇಲಿನ ಗುಂಡಿಗಳನ್ನು ಗುರುತಿಸಿ ಶೀಘ್ರವೇ ಮುಚ್ಚುವ ಮೂಲಕ ಅವಘಡಗಳನ್ನು ತಪ್ಪಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್ .ದಿವಾಕರ್ ಪಿಡಬ್ಲೂಡಿ ಅಧಿಕಾರಿಗಳಿಗೆ ಸೂಚನೆ ನೀಡಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣ ದಲ್ಲಿ ಏರ್ಪಡಿಸಿದ್ದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಸೋಮವಾರ ಅವರು ಮಾತನಾಡಿದರು. ಈಚೇಗೆ ರಸ್ತೆಗಳಲ್ಲಿ ಅಪಘಾತ ಪ್ರಕರಣಗಳು ಹೆಚ್ಚುತ್ತಿವೆ. ಮಳೆಯಿಂದಾಗಿ ರಸ್ತೆಗಳ ಮೇಲೆ ನೀರು ನಿಂತು ಗುಂಡಿಗಳು ಕಾಣದೇ ಸವಾರರು ಅವಘಡಗಳನ್ನು ಅನುಭವಿಸುತ್ತಿದ್ದಾರೆ. ವೈಜ್ಞಾನಿಕವಾಗಿ ರಸ್ತೆ ನಿರ್ಮಾಣ ಕಾಮಗಾರಿಗಳು ನಡೆಯದೇ ಅನೇಕ ದುರ್ಘಟನೆಗಳು ಸಂಭವಿಸಿವೆ. ಈಗಲಾದರೂ ಎಚ್ಚೆತ್ತು ಅಧಿಕಾರಿಗಳು ರಸ್ತೆಗಳ ನಿರ್ವಹಣೆಗೆ ಕಾರ್ಯೋನ್ಮುಖರಾಗಬೇಕು. ಎನ್ ಎಚ್‌ಎಐ ಅಧಿಕಾರಿಗಳ ಸಭೆಯಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಟ್ಟು 6 ಕಡೆ ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿ ಈಗಾಗಲೇ 5 ಬ್ಲಾಕ್ ಸ್ಪಾಟ್‌ಗಳನ್ನು ಸರಿಪಡಿಸಲಾಗಿದೆ ಎಂದು ವರದಿ ನೀಡಲಾಗಿದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ಬಿಎಂಎಂ ಕಂಪನಿ ಮುಂದಿನ ಡಣಾಪುರ ಕ್ರಾಸ್ ಬಳಿಯ ವಿದ್ಯುತ್ ದೀಪಗಳಿಲ್ಲದೇ ಕತ್ತಲು ಆವರಿಸಿದೆ. ಅದೇ ರಸ್ತೆಯಲ್ಲಿ ಬರುವ ಆರು ಹಳ್ಳಿಗಳಿಗೆ ಸಂಪರ್ಕಿಸುವ ರಸ್ತೆ ಮಾರ್ಗದಲ್ಲಿ ವಿದ್ಯುತ್ ದೀಪ ಇಲ್ಲದೇ ರಸ್ತೆ ಸಂಚಾರಕ್ಕೆ ತೊಂದರೆ ಆಗಿದೆ ಕೂಡಲೇ ವಿದ್ಯುತ್ ದೀಪಗಳನ್ನು ಅಳವಡಿಸಲು ಕ್ರಮವಹಿಸಬೇಕು. ಅರಸೀಕೆರೆಯಿಂದ ಮತ್ತಿಹಳ್ಳಿಗೆ ಹೋಗುವ ರಸ್ತೆ ಮಾರ್ಗದಲ್ಲಿ ಎರಡು ಕಿಲೋಮೀಟರ್ ನಷ್ಟು ರಸ್ತೆ ವಾಹನಗಳು ಸಂಚರಿಸಲು ಸಂಪೂರ್ಣ ಹದಗೆಟ್ಟಿದೆ ಶೀಘ್ರ ರಸ್ತೆ ಕಾಮಗಾರಿ ಸರಿಪಡಿಸಬೇಕು. ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕಿಸುವ ಸೇವಾ ರಸ್ತೆಗಳಲ್ಲಿ ಸೂಕ್ತ ನಾಮಫಲಕಗಳು, ರಸ್ತೆ ಅಡೆತಡೆಗಳನ್ನು ಅಳವಡಿಸಬೇಕು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು.ಬಿ.ಎಲ್ ಮಾತನಾಡಿ, ಡಾ.ಪುನೀತ್ ರಾಜಕುಮಾರ ವೃತ್ತದ ಬಳಿ ನಾಲ್ಕು ಚಕ್ರದ ವಾಹನಗಳ ಪಾರ್ಕಿಂಗ್ ನಿಯೋಜಿಸಬೇಕಿದೆ. ಹೊಸಪೇಟೆ ನಗರದ ರಾಷ್ಟ್ರೀಯ ಹೆದ್ದಾರಿ–50 ರಲ್ಲಿ ಬರುವ ಟನಲ್ ನಲ್ಲಿ ಸಿಸಿ ಕ್ಯಾಮರಾಗಳನ್ನು ಆಳವಡಿಸಲು ಕ್ರಮವಹಿಸಬೇಕು. ನಗರ ಸೇರಿದಂತೆ ಗ್ರಾಮೀಣ ಭಾಗದಲ್ಲಿ ರಸ್ತೆಗೆ ಅಡ್ಡಲಾಗಿರುವ ಮರಗಳ ಕೊಂಬೆಗಳನ್ನು ತೆರವುಗೊಳಿಸಬೇಕು. ಹೊಸಪೇಟೆ, ಹರಪನಹಳ್ಳಿ, ಕೂಡ್ಲಿಗಿ, ಹಾಗೂ ಹಗರಿಬೊಮ್ಮನಹಳ್ಳಿಯಲ್ಲಿ ಆಟೋ ನಿಲ್ದಾಣ ನಿರ್ಮಾಣ ಮಾಡಲು ಸಂಬಂಧಿಸಿದ ಉಪ ವಿಭಾಗದ ಅಧಿಕಾರಿಗಳು ಮತ್ತು ಟ್ರಾಫಿಕ್ ಪೊಲೀಸರು ಜಂಟಿಯಾಗಿ ಸ್ಥಳ ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಹೊಸಪೇಟೆ ನಗರದಲ್ಲಿ ಒಟ್ಟು 20 ಆಟೋ ಸ್ಟಾಂಡ್‌ಗಳನ್ನು ಗುರುತಿಸಿದ್ದು, ಈಗಾಗಲೇ 10 ಹಂತಗಳಲ್ಲಿ ನಿರ್ಮಿಸಲು ಸೂಚಿಸಿದರು. ಮೊದಲ ಹಂತದಲ್ಲಿ ಪ್ರತಿಯೊಂದು ಸ್ಟಾಂಡ್‌ಗಳಲ್ಲಿ ಕನಿಷ್ಠ 10–15 ಆಟೋಗಳನ್ನು ನಿಲ್ಲಿಸಲು ಅನುಕೂಲ ಕಲ್ಪಿಸಬೇಕಿದೆ ಎಂದರು.

ಸಭೆಯಲ್ಲಿ ಸಾರಿಗೆ ಇಲಾಖೆ, ಪಿಡಬ್ಲೂಡಿ, ಎನ್‌ಎಚ್‌ಎಐ ಸೇರಿ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ಮಕ್ಕಳ ಜೀವಕ್ಕೆ ಕಂಠಕ ಕೆರೆಯಂತಾದ ಸರ್ವೀಸ್ ರಸ್ತೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ಭಾನುವಾರ ಮಧ್ಯಾಹ್ನ ಸುರಿದ ಮಳೆಗೆ ಕಾನಹೊಸಹಳ್ಳಿ ರಾಷ್ಟ್ರೀಯ ಹೆದ್ದಾರಿ 50 ರ ಪಕ್ಕದ ಸರ್ವಿಸ್ ರಸ್ತೆಯ ಪಕ್ಕದ ದಲಿತರ ಕಾಲೋನಿಯ ಮನೆಗಳಿಗೆ ಮಳೆಯ ನೀರು ನುಗ್ಗಿದ್ದು, ಹಳ್ಳದಂತಾದ ನಡು ರಸ್ತೆಯಲ್ಲಿ ಮಕ್ಕಳು ಸೇರಿದಂತೆ ಸಾರ್ವಜನಿಕರು ಹಾಗೂ ವಾಹನಗಳು ಸಂಚರಿಸಲು ತೀವ್ರ ಹರಸಾಹಸಪಟ್ಟರು.

ಮಳೆಗಾಲದಲ್ಲಿ ಇಂತಹ ಘಟನೆಗಳು ಮರುಕಳಿಸುತ್ತಿದ್ದರೂ ಸಂಬಂಧಿಸಿದ ಅಧಿಕಾರಿಗಳು, ಎನ್‌ಎಚ್‌ಎಐ ಅಧಿಕಾರಿಗಳು ಕಂಡು ಕಾಣದಂತಿದ್ದಾರೆ. ಅನೇಕ ಬಾರಿ ಮನವಿ ಮಾಡಿದರೂ ಪ್ರಯೋಜನವಾಗುತ್ತಿಲ್ಲವಂದು ಗ್ರಾಮಸ್ಥರು ದೂರಿದ್ದಾರೆ. ಈಗಲಾದರೂ ಇಂಥ ಪರಿಸ್ಥಿತಿಯನ್ನು ನೋಡಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಬಂದು ಸ್ಥಳ ಪರಿಶೀಲಿಸಿ ಮುಂದಾಗುವ ಅವಘಡಗಳನ್ನು ತಪ್ಪಿಸಬೇಕೆಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

> ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಪ್ರಾರಂಭವಾದಾಗಿನಿಂದಲೂ ಮಳೆ ಬಂದರೆ ಇದೇ ಗೋಳು. ಚುನಾಯಿತ ಪ್ರತಿನಿಧಿಗಳಾಗಲಿ ಸಂಬಂಧಪಟ್ಟ ಅಧಿಕಾರಿಗಳಾಗಲಿ ಇಲ್ಲಿ ಯವರೆಗೂ ಸಮಸ್ಯೆಗೆ ಪರಿಹಾರ ನೀಡಲು ಮುಂದಾಗದಿರುವುದರಿಂದ ಇಲ್ಲಿ ಜೀವನ ನಡೆಸುವ ಕುಟುಂಬಗಳು ನರಕಯಾತನೇ ಅನುಭೋಗಿಸುವಂತಾಗಿದೆ.
> – ಕೆ ಶ್ರೀಧರ್ ವಕೀಲರು ಕಾನಹೊಸಹಳ್ಳಿ

> ಮಳೆ ಬಂದಾಗ ನೀರು ನಿಲ್ಲುವುದು ನಮ್ಮ ಗಮನಕ್ಕಿದೆ ಆದರೆ ಇದರ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ತಾಲೂಕು ಮಟ್ಟದ ಅಧಿಕಾರಿ ಗಳು ಹಾಗೂ ಸ್ಥಳೀಯ ಶಾಸಕರ ಗಮನಕ್ಕೂ ಸಹ ಇದೆ, ಇದರ ಬಗ್ಗೆ ಮೇಲಾಧಿಕಾರಿಗಳೇ ಕ್ರಮ ತೆಗೆದುಕೊಳ್ಳಬೇಕು ಈ ಕಾಮಗಾರಿಗೆ ನಮ್ಮ ಗ್ರಾಮ ಪಂಚಾಯತಿಯಿಂದ ಅನುದಾನ ಸಾಲದು
> – ವಿನಯ್ ಕುಮಾರ್ ಪಿಡಿಓ ಹೊಸಹಳ್ಳಿ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
HAMPI TIMES
Print & Digital Kannada Daily

## ಈ ಬಾರಿ ಫಲಿತಾಂಶ ನಮ್ಮದೆ
# ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ
### ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ಸಹಕಾರ ಇರಲಿ

ಪ್ರಿಯ ಗ್ರಾಮಸ್ಥರೇ, ವಾರ್ಡ್ ನಿವಾಸಿಗಳೇ, ಶಿಕ್ಷಣ ಪ್ರೇಮಿಗಳೇ, ಜನಪ್ರತಿನಿಧಿಗಳೇ....

ನಾವೆಲ್ಲರೂ ನಮ್ಮ ಮಕ್ಕಳ ಭವಿಷ್ಯದ ಬಗ್ಗೆ ಕನಸು ಕಾಣುತ್ತೇವೆ, ಅವರ ಸಾಧನೆಯಲ್ಲಿ ಹೆಮ್ಮೆ ಪಡುತ್ತೇವೆ. ಆ ಕನಸುಗಳನ್ನು ನನಸಾಗಿಸಲು, ಆ ಹೆಮ್ಮೆಯನ್ನು ಹೆಚ್ಚಿಸಲು ಇದೀಗ ನಮಗೆ ಒಂದು ಸುವರ್ಣಾವಕಾಶ ಸಿಕ್ಕಿದೆ.

**'ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ'** - ಇದು ಕೇವಲ ಘೋಷಣೆಯಲ್ಲ, ನಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುವ ಒಂದು ಮಹತ್ತರ ಹೆಜ್ಜೆ. ನಮ್ಮೂರ, ನಮ್ಮ ವಾರ್ಡಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ನಮ್ಮ ಆಸ್ತಿ. ಅವರು ಉತ್ತಮ ಅಂಕ ಗಳಿಸಿ, ಉನ್ನತ ಶಿಕ್ಷಣ ಪಡೆದು, ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಬೆಳೆಯಲು ನಮ್ಮೆಲ್ಲರ ಸಹಕಾರ ಅತ್ಯಗತ್ಯ.

## ವಿದ್ಯಾರ್ಥಿಗಳ ಭವಿಷ್ಯಕ್ಕೆ ಮುನ್ನುಡಿ ಬರೆಯುವುದು ಹೇಗೆ?

**ಬಹಳ ಸರಳ! ನಿಮ್ಮ ಗ್ರಾಮದ, ನಿಮ್ಮ ವಾರ್ಡಿನ ಎಸ್‌ಎಸ್‌ಎಲ್‌ಸಿ ಮಕ್ಕಳನ್ನು ಗುರುತಿಸಿ. ಅವರೆಲ್ಲರಿಗೂ ಪ್ರತಿದಿನ ಸಂಜೆ ಒಂದೆಡೆ ಸೇರಿ ಸಾಮೂಹಿಕವಾಗಿ ಓದಲು ಒಂದು ಸ್ಥಳಾವಕಾಶ ಕಲ್ಪಿಸಿ. ಇದಕ್ಕಾಗಿ ಒಂದು ಸಮುದಾಯ ಭವನವಿರಬಹುದು, ಶಾಲೆಯ ಆವರಣ ವಿರಬಹುದು, ಗ್ರಂಥಾಲಯವಾಗಬಹುದು ಅಥವಾ ಯಾವುದೇ ಸುಲಭವಾಗಿ ತಲುಪಬಹುದಾದ ಸ್ಥಳವಿರ ಬಹುದು.**



ಗ್ರಾಮಗಳ ಸಮುದಾಯ ಭವನ/ ಗ್ರಂಥಾಲಯಗಳಲ್ಲಿ ವಿದ್ಯಾರ್ಥಿಗಳ ಸಾಮೂಹಿಕ ಓದು





## ಒಟ್ಟಾಗಿ ಓದಿದಾಗ ಏನಾಗುತ್ತದೆ?

ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ.
ಸಂದೇಹಗಳನ್ನು ಹಂಚಿಕೊಳ್ಳುತ್ತಾರೆ.
ಪರಸ್ಪರ ಸ್ಪೂರ್ತಿ ತುಂಬುತ್ತಾರೆ.
ಕಲಿಕೆಯ ವಾತಾವರಣ ಸೃಷ್ಟಿಯಾಗುತ್ತದೆ.
ಸಮೂಹ ಕಲಿಕೆಯ ಶಕ್ತಿ ಅನಾವರಣಗೊಳ್ಳುತ್ತದೆ.

**ಈ ಕಾರ್ಯದಲ್ಲಿ ಗ್ರಾಮದ ಸದಸ್ಯರು, ವಾರ್ಡ್ ಸದಸ್ಯರು, ಶಿಕ್ಷಣದ ಮಹತ್ವವನ್ನು ಬಲ್ಲ ಪ್ರತಿಯೊಬ್ಬರೂ ಕೈಜೋಡಿಸಬೇಕು. ನಮ್ಮೆಲ್ಲರ ಸಣ್ಣ ಪ್ರಯತ್ನ, ಈ ಮಕ್ಕಳ ದೊಡ್ಡ ಕನಸುಗಳಿಗೆ ನೀರೆರೆಯುತ್ತದೆ. ಅವರು ತಮ್ಮ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಲು ಇದು ಭದ್ರ ಬುನಾದಿಯಾಗುತ್ತದೆ.**

## ಹಂಪಿ ಟೈಮ್ಸ್ ನಿಮ್ಮೊಂದಿಗಿದೆ!

**ಈ ಮಹತ್ಕಾರ್ಯದಲ್ಲಿ ನಿಮಗೆ ಸಂಪೂರ್ಣ ಬೆಂಬಲ ನೀಡಲು ಹಂಪಿಟೈಮ್ಸ್ ಸಿದ್ಧವಿದೆ. ಮಕ್ಕಳ ಭವಿಷ್ಯಕ್ಕೆ ಬೆಳಕಾಗಲು ನಾವು ನಿಮ್ಮೊಂದಿಗೆ ಹೆಜ್ಜೆ ಹಾಕುತ್ತೇವೆ.
ಬನ್ನಿ, ಇಂದೇ ಮಕ್ಕಳ ಭವಿಷ್ಯಕ್ಕಾಗಿ ಒಂದಾಗೋಣ. ನಮ್ಮೂರ ವಿದ್ಯಾರ್ಥಿಗಳು ನಮ್ಮ ಹೆಮ್ಮೆಯಾಗುವಂತೆ, ಅವರ ಯಶಸ್ಸಿಗೆ ಸೇತುವೆಯಾಗೋಣ.
ಈ ಮೂಲಕ ನಮ್ಮ ಗ್ರಾಮ, ನಮ್ಮ ವಾರ್ಡ್‌ಗೆ ಕೀರ್ತಿ ತರೋಣ.
ನಿಮ್ಮ ಒಂದು ಚಿಕ್ಕ ಪ್ರಯತ್ನ, ನೂರಾರು ಮಕ್ಕಳ ಭವಿಷ್ಯಕ್ಕೆ ದೊಡ್ಡ ಬೆಳಕು!**

SCAN to READ
HAMPI TIMES E-PAPER

ನಿಮ್ಮ ಅಭಿಪ್ರಾಯಗಳಿಗೆ ಸ್ವಾಗತ, ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : 9448633038, ಹೊಸಪೇಟೆ, ವಿಜಯನಗರ ಜಿಲ್ಲೆ

# ಜೂ.24 ರಂದು ಬೃಹತ್ ರಕ್ತದಾನ ಶಿಬಿರ : ಆರೋಗ್ಯವಂತರು ರಕ್ತದಾನ ಮಾಡಿ–ಡಿಸಿ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತ, ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಸಹಯೋಗ ಮತ್ತು ಮಿನೇರಾ ಸ್ಟೀಲ್ ಇವರ ಸಹಕಾರದಲ್ಲಿ ಜೂ.24 ರಂದು ಬೆಳಿಗ್ಗೆ 08 ಗಂಟೆಗೆ ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ ಆವರಣದಲ್ಲಿ 'ಬೃಹತ್ ರಕ್ತದಾನ ಶಿಬಿರ' ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಶಿಬಿರದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಬಹುದಾಗಿದೆ.

**ರಕ್ತದಾನದಿಂದ ಉಪಯೋಗ:**

ರಕ್ತದಾನ ಮಾಡುವುದರಿಂದ ಹಲವಾರು ರೀತಿಯ ಪ್ರಯೋಜನಗಳಿದ್ದು, ಅದರಲ್ಲಿ ಹೊಸ ರಕ್ತದ ಉತ್ಪತ್ತಿ ಆಗುವುದರ ಜೊತೆಗೆ ರಕ್ತ ಚಲನೆಯ ಕಾರ್ಯತತ್ಪರತೆ ಮತ್ತು ಜ್ಞಾಪಕ ಶಕ್ತಿ ವೃದ್ಧಿಯಾಗುತ್ತದೆ.

ಮುಖ್ಯವಾಗಿ ಇತ್ತೀಚಿನ ದಿನಗಳಲ್ಲಿ ಕೇಳಲಾಗುತ್ತಿರುವ ಹೃದಯಾಘಾತ ಪ್ರಕರಣಗಳು ಶೇ.80 ಕ್ಕಿಂತಲೂ ಕಡಿಮೆಯಾಗುತ್ತದೆ. ರಕ್ತದೊತ್ತಡ ಸೇರಿದಂತೆ ರಕ್ತದಲ್ಲಿ ಕೊಬ್ಬಿನಾಂಶ ಕಡಿಮೆ ಮಾಡಲು ರಕ್ತದಾನ ಮಾಡುವುದರಿಂದ ಸಹಾಯವಾಗಲಿದೆ.

**ಏಕೆ ರಕ್ತದಾನ ಮಾಡಬೇಕು?:**

ಒಬ್ಬರಿಂದ ಪಡೆದ ರಕ್ತವನ್ನು ಹೊಲ್ ಬ್ಲಡ್, ಪ್ಲೇಟ್‌ಲೆಟ್ಸ್, ಪ್ಲಾಸ್ಮಾ, ಪ್ಯಾಕಡ್ ಸೆಲ್ಸ್, ಎಂಬ ನಾಲ್ಕು ರೂಪದಲ್ಲಿ ವ್ಯಕ್ತಿಯ ಜೀವ ಉಳಿಸಲು ಬಳಸಬಹುದಾಗಿದ್ದು, ಪ್ರಸ್ತುತ ದಿನಗಳಲ್ಲಿ ರಕ್ತದ ಅವಶ್ಯಕತೆಯಿರುವುದರಿಂದ 18 ವರ್ಷ ಮೇಲ್ಪಟ್ಟ ಆರೋಗ್ಯವಂತ ಪ್ರತಿಯೊಬ್ಬರೂ ರಕ್ತದಾನ ಮಾಡುವ ಮೂಲಕ ರಕ್ತಹೀನತೆಯಿಂದ ಬಳಲುವ ಗರ್ಭಿಣಿ ಸ್ತ್ರೀಯರಿಗೆ, ಶಸ್ತ್ರಚಿಕಿತ್ಸಾ ಹೆರಿಗೆ ವೇಳೆ ಮತ್ತು ಅಪಘಾತಗಳು, ತುರ್ತು ಶಸ್ತ್ರಚಿಕಿತ್ಸೆಗಳ ಸಂದರ್ಭಕ್ಕಾಗಿ ಹಾಗೂ ಕ್ಯಾನ್ಸರ್ ರೋಗಿಗಳಿಗೆ ಥ್ಯಾಲಿಸೀಮಿಯಾ, ಹಿಮೋಫಿಲಿಯಾ ಮುಂತಾದ ರೋಗಿಗಳ ಜೀವವನ್ನು ಉಳಿಸಲು ಸಹಾಯಕವಾಗಲಿದೆ. ಹಾಗಾಗಿ ಜನರ ಜೀವ ಉಳಿಸುವ ಕಾರ್ಯದಲ್ಲಿ ಭಾಗಿಯಾಗಬೇಕು ಎಂದು ತಿಳಿಸಿದ್ದಾರೆ.

**ಯಾರು ರಕ್ತದಾನ ಮಾಡಬಹುದು:**

45 ಕೆಜಿ ಮೇಲ್ಪಟ್ಟ ಹಾಗೂ 12.5 ಗ್ರಾಮ್‌ಗಿಂತ ಹೆಚ್ಚು ಹಿಮೋಗ್ಲೊಬಿನ್ ಇರುವ 18 ವರ್ಷ ಮೇಲ್ಪಟ್ಟ ಮಹಿಳೆಯರು ಪ್ರತಿ ನಾಲ್ಕು ತಿಂಗಳಿಗೊಮ್ಮೆ, ಪುರುಷರು ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು.

ಹಾಗಾಗಿ ಜೂ.24 ರಂದು ನಡೆಯುವ ಬೃಹತ್ ರಕ್ತದಾನ ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಕ್ತದಾನ ಮಾಡಬಹುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಮಾಯಾ ಪದಾರ್ಥ ಗ್ರಾಫೀನ್

## ಉಕ್ಕಿಗಿಂತ ಬಲವಾದ, ಕಾಗದಕ್ಕಿಂತ ತೆಳುವಾದ ಮಾಯಾ ಪದಾರ್ಥ!

ನಿಮ್ಮ ಫೋನ್ ಒಂದೇ ಚಾರ್ಜ್ನಲ್ಲಿ ಒಂದು ವಾರ ಕೆಲಸ ಮಾಡುತ್ತದೆ! ಬಿದ್ದರೂ ಒಡೆಯದ ಫೋನ್! ಮಡಿಸಬಹುದಾದ ಸ್ಕ್ರೀನ್!, ಕನಸಲ್ಲ, ಇದು ಗ್ರಾಫೀನಿನ ಭರವಸೆ, ನಿಮ್ಮ ಪೆನ್ಸಿಲ್ಲಿನ ಕಾರ್ಬನ್ನಿಂದ ಹುಟ್ಟಿದ ಸೂಪರ್ ಸಾಮಗ್ರಿ! ಏನಿದು ಗ್ರಾಫೀನ್?

**ಹೊಸ ಪದಾರ್ಥ, ಹೊಸ ಕ್ರಾಂತಿ**

ಮಾನವ ಸಮಾಜದ ಇತಿಹಾಸವನ್ನು ಗಮನಿಸಿದರೆ, ಪ್ರತಿ ದೊಡ್ಡ ಬದಲಾವಣೆಗೂ ಹೊಸ ಪದಾರ್ಥಗಳ ಆವಿಷ್ಕಾರವೇ ಕಾರಣವಾಗಿದೆ. ಕಂಚಿನ ಯುಗ, ಕಬ್ಬಿಣದ ಯುಗಗಳು ನಾಗರಿಕತೆಯ ಬೆಳವಣಿಗೆಗೆ ದಾರಿಯಾದವು. 19ನೇ ಶತಮಾನದಲ್ಲಿ ಉಕ್ಕಿನ ಶೋಧವು ಕೈಗಾರಿಕಾ ಕ್ರಾಂತಿಯನ್ನು ತಂದಿತು. 20ನೇ ಶತಮಾನದಲ್ಲಿ ಸಿಲಿಕಾನ್ ಸೆಮಿಕಂಡಕ್ಟರ್ಗಳು ಡಿಜಿಟಲ್ ಯುಗಕ್ಕೆ ಜನ್ಮಕೊಟ್ಟವು. ಇಂದು, 21ನೇ ಶತಮಾನದ 'ಮಾಯಾ ಪದಾರ್ಥ" ಎಂದು ಕರೆಯಲ್ಪಡುವ ಗ್ರಾಫೀನ್, ನಮ್ಮ ಭವಿಷ್ಯವನ್ನು ಕ್ರಾಂತಿಕಾರಿಯಾಗಿ ಮರುರೂಪಿಸಲು ಸಜ್ಜಾಗಿದೆ!

**ಗ್ರಾಫೀನ್ ಎಂದರೇನು?**

ಗ್ರಾಫೀನ್ ಎಂಬುದು ಕಾರ್ಬನ್ ಪರಮಾಣುಗಳ ಒಂದು ತೆಳುವಾದ ಶೀಟ್, ಜೇನುಗೂಡಿನಂತಹ ಷಡ್ಭುಜಾಕೃತಿಯ ಜಾಲರಿಯ ರೂಪದಲ್ಲಿ ಜೋಡಿಸಲ್ಪಟ್ಟಿದೆ. ಇದು ನಿಮ್ಮ ಪೆನ್ಸಿಲ್ನ ಗ್ರಾಫೈಟ್ನಿಂದ ಬಂದಿದೆ, ಆದರೆ ಕೇವಲ ಒಂದು ಪರಮಾಣು ದಪ್ಪದ ರೂಪದಲ್ಲಿ! ಗ್ರಾಫೈಟ್ ಮೃದುವಾದರೆ, ಗ್ರಾಫೀನ್ನ ವಿಶಿಷ್ಟ ರಚನೆಯು ಅದಕ್ಕೆ ಅಸಾಧಾರಣ ಗುಣಗಳನ್ನು ನೀಡಿದೆ. ಇದು ಮಾನವ ಕೂದಲಿಗಿಂತ ಒಂದು ಕೋಟಿ ಪಟ್ಟು ತೆಳ್ಳಗಿದೆ, ಆದರೆ ಉಕ್ಕಿಗಿಂತ 200 ಪಟ್ಟು ಬಲಿಷ್ಠ! ಇದು ಶಾಖ ಮತ್ತು ವಿದ್ಯುತ್ನ ಅತ್ಯುತ್ತಮ ವಾಹಕ, ಬಹುತೇಕ ಪಾರದರ್ಶಕ ಮತ್ತು ಬಾಗುವ ಗುಣ ಹೊಂದಿದೆ. ಗ್ರಾಫೀನ್ ಯಾವುದೇ ಕ್ಷೇತ್ರದಲ್ಲೂ ಉಪಯುಕ್ತ ಪದಾರ್ಥ ಎಂಬಂತೆ ಕಾಣುತ್ತಿದೆ!

**ಗ್ರಾಫೀನ್ ಶೋಧ: ಒಂದು ಸೆಲ್ಲೋ ಟೇಪ್ ಮತ್ತು ಕನಸು**




ಡಾ. ಎಸ್.ಎಂ. ಶಶಿಧರ್
ಟೆಕ್ ಪರಿಣತರು

Scan For Digital Colourful
HAMPI TIMES E-paper

ಹದಿನಾರನೇ ಶತಮಾನದ ಆರಂಭದಲ್ಲಿ ಉತ್ತರ ಇಂಗ್ಲೆಂಡಿನ ಕುಂಬ್ರಿಯಾದಲ್ಲಿ ಗ್ರ್ಯಾಫೈಟನ್ನು ಮೊದಲು ಕಂಡುಹಿಡಿಯಲಾಯಿತು. ಇದು ಅಪಾರದರ್ಶಕ, ಇಂಗಾಲದ ಬಹುರೂಪಿ ಪದಾರ್ಥವಾಗಿದ್ದು, ಸೀಸ ಎಂಬ ಲೋಹವನ್ನು ಹೋಲುವ ಕಾರಣ, ಇದನ್ನು ಆಡುಮಾತಿನಲ್ಲಿ 'ಕಪ್ಪು ಸೀಸ' ಎಂದೂ ಕರೆಯಲಾಯಿತು. ಪೆನ್ಸಿಲ್ಲನ್ನು ಮೊದಲು 'ಸೀಸದ ಕಡ್ಡಿ' ಎಂದೂ ಕರೆಯುತ್ತಿದ್ದದ್ದು ನಿಮಗೆ ನೆನಪಿರಬಹುದು. 1789 ರಲ್ಲಿ ಜರ್ಮನ್ ರಸಾಯನಶಾಸ್ತ್ರಜ್ಞ ಮತ್ತು ಖನಿಜಶಾಸ್ತ್ರಜ್ಞ ಎ.ಜಿ.





ವರ್ನರ್ ಅವರು ಗ್ರ್ಯಾಫೈಟಿಗೆ ಹೆಸರಿಟ್ಟರು, ಗ್ರ್ಯಾಫೈಟ್ನ ಹೆಸರು, 'ಗ್ರಾಫ್' ಅಂದರೆ 'ಬರೆಯುವುದು' ಎಂಬ ಅರ್ಥ ಹೊಂದಿದೆ. .

ವಿಜ್ಞಾನಿಗಳು ದೀರ್ಘಕಾಲ ಗ್ರ್ಯಾಫೈಟ್ನ ಒಂದೇ ಪದರವನ್ನು ಪ್ರತ್ಯೇಕಿಸಬಹುದೇ ಎಂದು ಯೋಚಿಸುತ್ತಿದ್ದರು, ಆದರೆ, ಇದು ಕೇವಲ ಸಿದ್ಧಾಂತವಾಗಿತ್ತು. 2004ರಲ್ಲಿ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದ ಆಂಡ್ರೆ ಗೀಮ್ ಮತ್ತು ಕಾನ್ಸ್ಟಾಂಟಿನ್ ನೊವೊಸೆಲೊವ್ ಒಂದು ಸರಳ ಆವಿಷ್ಕಾರದ ಮೂಲಕ ಇತಿಹಾಸ ಸೃಷ್ಟಿಸಿದರು. ದೊಡ್ಡ ಯಂತ್ರವಿಲ್ಲ, ದುಬಾರಿ ಉಪಕರಣವಿಲ್ಲ, ಕೇವಲ ಒಂದು ಸೆಲ್ಲೋ ಟೇಪ್ ರೋಲ್! ಗ್ರ್ಯಾಫೈಟ್ನ ತುಂಡಿನ ಮೇಲೆ ಟೇಪ್ ಒತ್ತಿ, ಪದರ–ಪದರವಾಗಿ ಬೇರ್ಪಡಿಸಿ, ಕೊನೆಗೆ ಒಂದೇ ಪರಮಾಣು ದಪ್ಪದ ಗ್ರಾಫೀನ್ ಶೀಟ್ ಪಡೆದರು. ಅದೇ ಗ್ರಾಫೀನ್! ಈ ಆವಿಷ್ಕಾರವು ತುಂಬಾ ವಿಚಿತ್ರವಾಗಿತ್ತು, ವೈಜ್ಞಾನಿಕ ಜಗತ್ತು ಮೊದಲಿಗೆ ಸಂದೇಹದಿಂದ ನೋಡಿತು. ಪ್ರಸಿದ್ಧ ಜರ್ನಲ್ 'ನೇಚರ್' ಈ ಪ್ರಯೋಗದ ಕುರಿತಾದ ಅವರ ಸಂಶೋಧನಾ ಲೇಖನವನ್ನು ಎರಡು ಬಾರಿ ತಿರಸ್ಕರಿಸಿತು. ಕೊನೆಗೆ, ಅವರ ಸಂಶೋಧನೆ ಪ್ರಕಟವಾಯಿತು, ಮತ್ತು 2010ರಲ್ಲಿ ಗೀಮ್ ಮತ್ತು ನೊವೊಸೆಲೊವ್ ಅವರಿಗೆ ಈ ಆವಿಷ್ಕಾರಕ್ಕಾಗಿ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿ ಲಭಿಸಿತು.

**ಗ್ರಾಫೀನ್ ವಿಸ್ಮಯಕರ ಗುಣಗಳು**

ಗ್ರಾಫೀನ್ ಒಂದು ಸೂಪರ್ ಸ್ಟಾರ್! ಇದು ತಾಮ್ರಕ್ಕಿಂತ ನೂರು ಪಟ್ಟು ಉತ್ತಮವಾಗಿ ವಿದ್ಯುತ್ ಸಾಗಿಸುತ್ತದೆ, ವಜ್ರಕ್ಕಿಂತ ಉತ್ತಮವಾಗಿ ಶಾಖವನ್ನು ಸಾಗಿಸುತ್ತದೆ, ಮತ್ತು ಮುರಿಯದೆ ಬಾಗುತ್ತದೆ. ಇದರಿಂದ ತಯಾರಾದ ಟಚ್ಸ್ಕ್ರೀನ್ ಗಳು ಕಾಗದದಂತೆ ಫೋಲ್ಡ್ ಆಗಬಹುದು, ಆದರೆ ಒಡೆಯದು. ಗ್ರಾಫೀನ್ ಬ್ಯಾಟರಿಗಳು ಕೆಲವೇ ಸೆಕೆಂಡುಗಳಲ್ಲಿ ಚಾರ್ಜ್ ಆಗಿ, ದಿನಗಟ್ಟಲೇ ಓಡಬಹುದು. ಸಿಲಿಕಾನ್ ಚಿಪ್ಗಳಿಗಿಂತ ಸಾವಿರ ಪಟ್ಟು ವೇಗವಾಗಿ ಕೆಲಸ ಮಾಡುವ ಗ್ರಾಫೀನ್ ಚಿಪ್ಗಳು, ಕಡಿಮೆ ವಿದ್ಯುತ್ ಬಳಸುತ್ತವೆ. ಗ್ರಾಫೀನ್ ಬ್ಯಾಟರಿಗಳು ಕೆಲವೇ ಸೆಕೆಂಡುಗಳಲ್ಲಿ ಚಾರ್ಜ್ ಆಗಿ, ಇಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಸಮಯವನ್ನು ಗಂಟೆಗಳಿಂದ ನಿಮಿಷಗಳಿಗೆ ತಗ್ಗಿಸಬಹುದು. ವೈದ್ಯಕೀಯ ಕ್ಷೇತ್ರದಲ್ಲಿ, ಗ್ರಾಫೀನ್ ನ್ಯಾನೊಪಾರ್ಟಿಕಲ್ಗಳು ಕ್ಯಾನ್ಸರ್ ಕೋಶಗಳನ್ನು ನಿಖರವಾಗಿ ಗುರಿಯಾಗಿಸಿ, ಆರೋಗ್ಯವಂತ ಕೋಶಗಳಿಗೆ ಹಾನಿಯಾಗದಂತೆ ಚಿಕಿತ್ಸೆ ನೀಡಬಹುದು. ಗ್ರಾಫೀನ್ನಿಂದ ಬುಲೆಟ್ಪ್ರೂಫ್ ಜಾಕೆಟ್ಗಳಿಂದ ಹಿಡಿದು, ಸಮುದ್ರದ ನೀರನ್ನು, ಕುಡಿಯುವ ನೀರಾಗಿಸುವ ಫಿಲ್ಟರುಗಳವರೆಗೆ ಎಲ್ಲವೂ ಸಾಧ್ಯ!

**ಗ್ರಾಫೀನ್ ಉದ್ಯಮ: ಅವಕಾಶಗಳು ಮತ್ತು ಸವಾಲುಗಳು**

ಗ್ರಾಫೀನ್ನಿಂದ ದೊಡ್ಡ ನಿರೀಕ್ಷೆಗಳಿವೆ, ಮತ್ತು ಈ ಗುಣಗಳನ್ನು ಸದುಪಯೋಗಪಡಿಸಿಕೊಳ್ಳುವ ಕಂಪನಿಗಳಿಗೆ ಭಾರೀ ಲಾಭ ಸಿಗಬಹುದು. ಆದರೆ ಸವಾಲುಗಳೂ ಇವೆ. ದೊಡ್ಡ ಪ್ರಮಾಣದಲ್ಲಿ ಉತ್ತಮ ಗುಣಮಟ್ಟದ ಗ್ರಾಫೀನ್ ತಯಾರಿಸುವುದು ದುಬಾರಿಯಾಗಿದೆ. ಸೆಲ್ಲೋ ಟೇಪ್ ವಿಧಾನವು, ಆವಿಷ್ಕಾರಕ್ಕೇನೋ ಕೆಲಸ ಮಾಡಿತು, ಆದರೆ ಕಾರ್ಖಾನೆಗಳಿಗೆ ಇದು ಸಾಧ್ಯವಾಗದು. ರಾಸಾಯನಿಕ ಆವಿ ಸಂಗ್ರಹ ಮತ್ತು ದ್ರವ ಫೇಸ್ ಎಕ್ಸ್ಫೋಲಿಯೇಷನ್ ವಿಧಾನಗಳು ಭರವಸೆಯನ್ನು ತೋರಿದರೂ, ಗುಣಮಟ್ಟ ನಿಯಂತ್ರಣ ಒಂದು ದೊಡ್ಡ ತೊಡಕಾಗಿದೆ. ಇತ್ತೀಚಿನ ಅಧ್ಯಯನವೊಂದು ಬಹುತೇಕ ತಯಾರಕರ ಗ್ರಾಫೀನ್ ಕಳಪೆ ಗುಣಮಟ್ಟದ್ದಾಗಿದೆ ಎಂದು ಕಂಡುಕೊಂಡಿತು, ಹೆಚ್ಚಿನವು ಗ್ರಾಫೀನಿಗಿಂತ ಗ್ರಾಫೈಟ್ ಪುಡಿಯಂತಿತ್ತು ಎನ್ನಲಾಗಿದೆ!

ಭಾರತ ಸರ್ಕಾರ 'ನ್ಯಾಷನಲ್ ಗ್ರಾಫೀನ್ ಮಿಷನ್' ಎಂಬ ಯೋಜನೆ ರೂಪಿಸಿ ಒಂದು ಸಾವಿರ ಕೋಟಿ ಹೂಡಿಕೆಯೊಂದಿಗೆ ಗ್ರಾಫೀನ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುತ್ತಿದೆ. ಕೃತಕ ಬುದ್ಧಿಮತ್ತೆ (ಎಐ) ಮತ್ತು ಕ್ವಾಂಟಮ್ ಕಂಪ್ಯೂಟಿಂಗ್ನಂತೆ, ಗ್ರಾಫೀನ್ ಕೂಡ ತಂತ್ರಜ್ಞಾನ ಕ್ಷೇತ್ರವನ್ನು ಕ್ರಾಂತಿಗೊಳಿಸಲಿದೆ.


**ಹೊಸ ಅಧ್ಯಾಯ**

ಗ್ರಾಫೀನ್ ಕೇವಲ ಒಂದು ಸಾಮಗ್ರಿಯಲ್ಲ, ತಂತ್ರಜ್ಞಾನದ ಹೊಸ ಯುಗದ ದಾರಿದೀಪ! ಎಲೆಕ್ಟ್ರಾನಿಕ್ಸ್, ವಿದ್ಯುಚ್ಛಕ್ತಿ, ವೈದ್ಯಕೀಯ, ಮತ್ತು ಪರಿಸರ ಸಂರಕ್ಷಣೆಯಂತಹ ಕ್ಷೇತ್ರಗಳಲ್ಲಿ ಇದು ಕ್ರಾಂತಿಯನ್ನುಂಟು ಮಾಡಲಿದೆ. ಸಿಲಿಕಾನ್ ಆವಿಷ್ಕಾರದ ನಂತರ ಡಿಜಿಟಲ್ ಯುಗ ಅರಳಲು ಒಂದು ಶತಮಾನವೇ ಬೇಕಾಯಿತು. ಆದರೆ, ಗ್ರಾಫೀನ್ ಕ್ರಾಂತಿ ಇನ್ನೊಂದು ದಶಕದೊಳಗೇ ನಡೆಯಲಿದೆ! ಹೊಸ ಭವಿಷ್ಯಕ್ಕಾಗಿ ಕಾತರದಿಂದ ಕಾಯೋಣ!

# ರಾಜಕೀಯ ಮತ್ತು ಯುವಜನತೆ

ಮನುಷ್ಯ ಈ ನೆಲದಲ್ಲಿ ಹುಟ್ಟಿ ತನ್ನ ಸಂತತಿಯನ್ನು ರೂಪಿಸಿಕೊಂಡು ಕುಲದ ಹೆಸರಿನಲ್ಲಿ ಗುಂಪುಗಳಾಗಿ ಬದುಕುವುದಕ್ಕೆ ಆರಂಭಿಸಿದ ಮೇಲೆ ಆ ಗುಂಪಿಗೊಬ್ಬ ನಾಯಕ ಅವನಿಗೆ ಅವನ ಇಚ್ಛೆ ಮತ್ತು ತನ್ನ ಜೊತೆಗೆ ಕೂಡಿಕೊಂಡು ಬದುಕುವ ಜನರ ಆಸೆಯನ್ನು ಪೂರೈಸುವ ಜೊತೆಯಲ್ಲಿ ಅವರಿಗೆ ರಕ್ಷಣೆಯನ್ನು ಒದಗಿಸುವುದೇ ಪ್ರಧಾನವಾದದ್ದು ಎಂದು ನಂಬಲಾಗಿತ್ತು. ಈ ನಂಬಿಕೆಯೇ ದೈವತ್ವವನ್ನು ಆರೋಪಿಸಿಕೊಳ್ಳುವಂತೆ, ಅಧಿಕಾರವನ್ನು ರೂಪಿಸಿ ಕೊಂಡು ರಾಜ್ಯವನ್ನು ಕಟ್ಟುವಂತೆ ಮಾಡಿತು. ರಾಜ್ಯ, ರಾಜ, ಸೈನ್ಯ ಅಂಬೊದೆಲ್ಲ ನಡೆದಾಡುವುದಕ್ಕೆ ಶುರುವಾದ ತರುವಾಯ ರಾಜಕೀಯಕ್ಕೆ ಹೊಸ ಆಯಾಮವೇ ಹುಟ್ಟಿಕೊಂಡು ಕಾಲ–ಕಾಲಕ್ಕೆ ಅದರ ರೂಪಗಳು ಪಲ್ಲಟವಾಗುತ್ತ ಮುಂದೆ ಸಿದ್ಧಾಂತಗಳು ಹುಟ್ಟಿಕೊಂಡು ಬೆಳೆಯುತ್ತ ಬಂದಿದೆ. ರಾಜಕೀಯ ಅಂದರೆ ಅದೊಂದು ಅಧಿಕಾರಯುತವಾದ ಸ್ಥಾನ ಅಲ್ಲಿ ತಂತ್ರ–ಕುತಂತ್ರ, ಸತ್ಯ, ಸುಳ್ಳು, ತಾನು, ತನ್ನದು, ದೇಶ, ರಾಜ್ಯ ಅಂಬೊ ವಿವೇಚನೆ ಇದೆ.

ಆಧುನಿಕ ಪ್ರಜಾಪ್ರಭುತ್ವವು ಅಸ್ಥಿತ್ವಕ್ಕೆ ಬರುವ ಮುಂಚೆ ರಾಜ ಪ್ರಭುತ್ವವು ನೆಲದ ವಿಸ್ತರಣೆ, ಸಂಪತ್ತಿನ ಕ್ರೂಡೀಕರಣ, ಹೆಣ್ಣು–ಹೊನ್ನು ಅನ್ನುವ ಮನೋಭಾವವು ಅನೇಕ ಯುದ್ಧವನ್ನು, ಸಾವು–ನೋವನ್ನು, ಸಾಮ್ರಾಜ್ಯದ ಅಳಿವು–ಉಳಿವನ್ನು ನಿರೂಪಿಸಿತ್ತು. ಈ ಕಾಲದಲ್ಲಿ ಸಮಾಜದಲ್ಲಿನ ಉನ್ನತವಾದ ಸಮುದಾಯಗಳು ಮತ್ತು ಬಲ ಹೊಂದಿದ ಇತರ ಕೆಲವು ಜನರು ರಾಜಕೀಯ ನಡೆಸಿದರು, ಅವರ ಲಾಭಕ್ಕಾಗಿ ನಡೆದರು ಇಲ್ಲಿ ಮುಖ್ಯವಾಗಿ ಮಹಿಳೆಯರು, ಕೆಳಸಮುದಾಯಗಳು, ದುಡಿಯುವ ವರ್ಗಗಳು ಬಹು ಪ್ರಮಾಣದಲ್ಲಿ ಶೋಷಣೆಗೆ ಒಳಗಾಗಿದ್ದು ನಮ್ಮ ತಿಳುವಳಿಕೆಯಲ್ಲಿ ಉಂಟು. ಈ ಕಾಲದಲ್ಲಿ ಯುವಕರನ್ನು ಸೈನ್ಯದಲ್ಲಿ ಬಳಸಿಕೊಂಡು ರಾಜ್ಯ ಕಟ್ಟುವುದಕ್ಕೆ ಬಳಸಿದರು. ಯುವಕರನ್ನು ರಾಜಕೀಯ ವ್ಯವಸ್ಥೆಯು ಒಂದಲ್ಲ ಒಂದು ರೀತಿಯಲ್ಲಿ ಬಳಸಿಕೊಳ್ಳುತಿತ್ತು.



ಡಾ. ಸುಬ್ರಹ್ಮಣ್ಯ ಸಿ ಕುಂದೂರು
ಮಂಗಳೂರು

Scan For Digital Colourful
HAMPI TIMES E-paper

ಸ್ವಾತಂತ್ರ ಭಾರತದ ತರುವಾಯ ಪ್ರಜಾಪ್ರಭುತ್ವ ಅಧಿಕಾರದ ನೆಲೆಯಲ್ಲಿ ಯುವಕರು ವಿಭಿನ್ನ ಕ್ಷೇತ್ರದಲ್ಲೂ ತೊಡಗಿಸಿಕೊಂಡರು ಹಾಗೂ ಇಂಗ್ಲೀಷ್ ಮಾದರಿಯ ಶಿಕ್ಷಣವನ್ನು ಪಡೆದುಕೊಂಡು ಶಿಕ್ಷಣವಂತರು ಎನ್ನಿಸಿಕೊಂಡರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪಂಚ ವಾರ್ಷಿಕ ಯೋಜನೆಯಿಂದ ಹಿಡಿದು ಪ್ರತಿವರ್ಷವು ಹತ್ತು ಹಲವು ಯೋಜನೆಯನ್ನು ಹಮ್ಮಿಕೊಂಡಿತ್ತಲ್ಲದೆ ಆ ಮೂಲಕ ಯುವಕರನ್ನು ದೇಶದ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕು ಅನ್ನೋ ಉದ್ದೇಶವನ್ನು ಪ್ರತಿಯೊಂದು ರಾಜಕೀಯ ವ್ಯವಸ್ಥೆಯು ಹೊಂದಿದೆ ಎನ್ನುವುದು ಸತ್ಯ ಆದರೆ ಈ ಯೋಜನೆಗಳನ್ನು ಹೇಗೆ ಬಳಸಿಕೊಂಡು ತನ್ನದಾಗಿಸಿಕೊಂಡು ದೇಶದ ಬೆಳವಣಿಗೆಯಲ್ಲಿ ಕಾಣಿಕೆ ನೀಡಬೇಕು ಅನ್ನೋ ತಿಳುವಳಿಕೆ ಯುವಕರಿಗೆ ದಕ್ಕಿಲ್ಲ ಮತ್ತು ಸರ್ಕಾರಕ್ಕೆ ಯುವಕರನ್ನು ಹೇಗೆ ಬಳಸಿಕೊಳ್ಳಬೇಕು ಎನ್ನುವ ತಾತ್ವಿಕತೆಯ ಅರಿವು ಇಲ್ಲ. ಈ ರೀತಿಯ ಅಸಮತೋಲನವಾದ ನಿಲುವುಗಳು, ಯೋಜನೆಗಳು ಯಾವುದೇ ಫಲವನ್ನು ನೀಡುತ್ತಿಲ್ಲ ಎನ್ನವುದು ಇವತ್ತಿನ ವಾಸ್ತವಾಗಿದೆ. ನಾವು ಯೋಚಿಸಬೇಕಾಗಿದ್ದು ಯುವಕರು ಸರ್ಕಾರವನ್ನು ರಚಿಸುವುದರಲ್ಲಿ ತೋರಬೇಕಾದ ಆಸಕ್ತಿ ಏನು? ಸರ್ಕಾರ ಯುವಕರನ್ನು ಬಳಸಿಕೊಳ್ಳುವುದಕ್ಕೆ ನಡೆಯಬೇಕಾದ ದಾರಿ ಯಾವುದು ಎಂದು.



ಹದಿನೆಂಟು ವರ್ಷ ವಯಸ್ಸು ತುಂಬಿದ ಪ್ರತಿಯೊಬ್ಬ ಯುವಕ/ಯುವತಿಗೂ ಓಟು ಮಾಡುವ ಹಕ್ಕನ್ನು ಭಾರತೀಯ ಸಂವಿಧಾನ ನೀಡಿದೆ. ಇದರ ಬಗ್ಗೆ ಸರಿಯಾದ ಅರಿವು ಯುವ ಸಮುದಾಯಕ್ಕೆ ಉಂಟೆ, ಎಷ್ಟು ಜನ ಹದಿನೆಂಟು ವರ್ಷಕ್ಕೆ ಓಟಿನ ಕಾರ್ಡು ಮಾಡಿಸಿದ್ದಾರೆ, ಅದರ ಕುರಿತು ಅವರಿಗೆ ಇರುವ ತಿಳುವಳಿಕೆ ಏನು ಎನ್ನುವುದನ್ನು ತರ್ಕಿಸುವುದಕ್ಕೆ ಹೋದರೆ ಸೋಜಿಗ ಅನ್ನಿಸುತ್ತದೆ. ದುಡಿಯುವ ಬಹು ಸಮುದಾಯಗಳು ರಾಜಕೀಯದ ಬಗ್ಗೆ ಒಲವನ್ನು ಇಟ್ಟುಕೊಳ್ಳದೆ ಕೇವಲ ಗುರುತಿನ ಅಭಿವ್ಯಕ್ತಿಯ ನೆಲೆಯಲ್ಲಿ ಓಟಿನ ಕಾರ್ಡ್ ಮಾಡಿಸಿದ್ದಾರೆ; ಚುನಾವಣೆಗಳು ಹುಟ್ಟಿಕೊಂಡಾಗ ಓಟಿಗಾಗಿ ಪಕ್ಷದ ಮುಖಂಡರುಗಳು ಮಾಡಿಸಿಕೊಡವ ಓಟಿನ ಕಾರ್ಡ್ನ್ನೇ ಪಡೆದುಕೊಂಡು ಇಟ್ಟುಕೊಂಡಿದ್ದಾರೆ. ನಾವು ದೇಶದ ಆಗು–ಹೋಗುಗಳನ್ನು ನಿಭಾಯಿಸುವ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕು ಅಂಬೊ ಪ್ರಜ್ಞೆ ಮತ ಹಾಕುವ ಬಹು ಮಂದಿ ಯುವಕರಲ್ಲಿ ಇಲ್ಲ. ಓಟು ಹಾಕಬೇಕಲ್ಲ ಎಂದು ಯಾವುದೇ ಯೋಚನೆ ಬದ್ಧತೆ ಇಲ್ಲದೆ ಯಾರಿಗೋ ಮತವನ್ನು ಹಾಕಿ ಬರುವುದು ಸಾಮಾನ್ಯವಾಗಿದೆ; ಹಣ ಕೊಟ್ಟವರಿಗೆ, ಬಟ್ಟೆ–ಬರೆ ನೀಡಿದವರಿಗೆ, ಚಿನ್ನ–ಬೆಳ್ಳಿ ತೊಡಿಸಿದವರಿಗೆ, ಹೆಂಡ–ಖಂಡ ಉಣ್ಣಿಸಿದವರಿಗೆ, ಪುಗಸಟ್ಟೆ ಸುಳ್ಳು ಹೇಳಿದವರಿಗೆ ಮತ ಹಾಕುವುದು ಯುವಕರ ಸೋಕಿಯಾಗಿದೆ. ಈ ಕಾರಣದಿಂದ ರಾಜಕೀಯ ವ್ಯವಸ್ಥೆಯು ಮೌಲ್ಯವನ್ನು ಕಳೆದುಕೊಳ್ಳುತ್ತಿದೆ. ಭ್ರಷ್ಟಚಾರ ಅನ್ನೋದು ಮಿತಿ ಮೀರಿ ಪ್ರತಿ ಹಳ್ಳಿ–ಹಳ್ಳಿಯನ್ನು ಪ್ರವೇಶ ಮಾಡಿರುವುದು ಪ್ರಜಾಪ್ರಭುತ್ವವನ್ನು ನಾಶ ಮಾಡುವ ಸೂಚನೆಗಳಂತೆ ಕಾಣುತ್ತದೆ.

ರಾಜಕೀಯದಲ್ಲಿ ತನ್ನ ತೊಡಗಿಸಿಕೊಂಡಿರುವ ಹೆಚ್ಚಿನ ತಲೆಗಳು ಅನಾದಿಕಾಲದಿಂದ ಶ್ರೀಮಂತರು ಒಂದಲ್ಲ ಒಂದು ನೆಲೆಯಿಂದ ದುಡಿಯುವ ಜನರನ್ನು ಶೋಷಣೆಗೆ ಒಳಗು ಮಾಡುತ್ತ ಬಂದವರು; ಸಂವಿಧಾನ ಮತ್ತು ಶಿಕ್ಷಣದ ಅರಿವೆ ಇಲ್ಲದ ಅನೇಕರು ದೇಶದ ಯುವ ಸಮುದಾಯವನ್ನು ನಡೆಸುವ ಯಾವ ಮೀಮಾಂಸೆಯ ತಿಳುವಳಿಕೆಯು ಇಲ್ಲದೆ, ತಾನು ಹಣ ಮಾಡಿಕೊಂಡು ತನಗೆ ಜೈ ಎಂದ ಜನರನ್ನು ಬೆಳೆಸಿಕೊಂಡು ಕೊಲೆ–ಸುಲಿಗೆ ಕಂಡು ಕಾಣದಂತೆ ಅಧಿಕಾರ ಮಾಡುವವರು ಇದ್ದಾರೆ! ರಾಜ್ಯ ಅದರ ತತ್ವ, ಜನ ಅವರ ಸಂವೇದನೆ ಮತ್ತು ನಾಡು–ನುಡಿಯ ಅಭಿವೃದ್ಧಿಯ ಒಳ ನೋಟಗಳೇ ಕಾಣಿಸದ ರಾಜಕಾರಣಿಗಳು ಕೇವಲ ತನ್ನ ಪಕ್ಷಕ್ಕೆ ದುಡಿದವರ, ತನ್ನ ವ್ಯವಹಾರಕ್ಕೆ ಬೆಂಬಲ ಒದಗಿಸಿದವರ ಕುರಿತು ಯೋಚಿಸುವುದು ಬಹುಮುಖ್ಯವಾಗಿ ಕಾಣಿಸುತ್ತದೆ. ಯಾವ ಯೋಜನೆಯನ್ನು ಮಾಡಿದರು ಅದು ಸರ್ವರಿಗೂ ಸಿಗಬೇಕು ಮತ್ತು ರಾಜ್ಯದ ಜನರ ಹಿತವನ್ನು ಕಾಯುವಂತಿರಬೇಕು ಅನ್ನೋ ಸತ್ವ ಹೆಚ್ಚಿನ ರಾಜಕೀಯದ ವ್ಯಕ್ತಿಗಳಲ್ಲಿ. ಇಲ್ಲಿ ಮುಖ್ಯವಾಗಿ ದ್ವೇಷ, ತನ್ನ ಪಕ್ಷದ ಜನ ಅವರಲ್ಲ, ತನಗೆ ಓಟು ಮಾಡಿಲ್ಲ ಅನ್ನೋ ಸಣ್ಣ ತನವೇ ರಾಜಕೀಯ ವ್ಯಕ್ತಿಗಳ ವರ್ಚಸ್ಸನ್ನು ಕುಗ್ಗಿಸುವಂತೆ ಮಾಡಿದೆ. ಇದು ಮುಖ್ಯವಾಗಿ ಬಹುಪಾಲು ಯುವಜನರು ಇಂದಿನ ರಾಜಕೀಯ ವ್ಯವಸ್ಥೆಯ ಮೇಲೆ ನಂಬಿಕೆಯನ್ನೇ ಕಳೆದುಕೊಳ್ಳುತ್ತಿರುವುದು ಪ್ರಜಾಪ್ರಭುತ್ವದ ದುರಂತದ ಮೂಲ ಸೆಲೆ ಅನ್ನಿಸುತ್ತದೆ.

ಸರ್ಕಾರ ಯುವಕರನ್ನು ತನ್ನ ಕಡೆ ಸೆಳೆಯುವುದಕ್ಕೆ ಆ ಮೂಲಕ ಅಭಿವೃದ್ಧಿ ಅನ್ನೋ ಭೂಮಿಕೆಯನ್ನು ರೂಪಿಸುವುದಕ್ಕೆ ಅನೇಕ ಯೋಜನೆಗಳನ್ನು ಹುಟ್ಟು ಹಾಕಿದೆ ಆದರೆ ಈ ಯೋಜನೆಗಳ ಬಗ್ಗೆ ಯುವಕರಿಗೆ ತಿಳಿವಳಿಕೆ ಮೂಡದಿರುವುದು, ಯೋಜನೆಗಳಲ್ಲಿ ಅವರನ್ನು ಬಳಸಿಕೊಳ್ಳದಿರುವುದು ನಿರುದ್ಯೋಗದ ಸಮಸ್ಯೆಗೆ ಕಾರಣವಾಗಿದೆ. ಇಂದು ಸರ್ಕಾರದ ಇಲಾಖೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಹುದ್ದೆಗಳು ಖಾಲಿ ಇವೆ. ಅದನ್ನು ತುಂಬಿಕೊಳ್ಳುವುದಕ್ಕೆ ಸರ್ಕಾರ ಯೋಚಿಸುತ್ತಿಲ್ಲ. ಏಕೆ? ಗುತ್ತಿಗೆಯ ನೆಲೆಯಲ್ಲಿ, ಅತಿಥಿ ಅಂಬೋ ಹಣೆಪಟ್ಟಿಯಲ್ಲಿ ಕೆಲಸಕ್ಕೆ ತೆಗೆದುಕೊಂಡು ನಿಭಾಯಿಸುತ್ತಿರುವುದು ಈಗ ಒಂದು ಪರಂಪರೆಯಾಗಿದೆ ಇದು ಗುಣಮಟ್ಟತೆಯನ್ನು ಪ್ರತಿಭೆಯನ್ನು ನೆಲ ಕಚ್ಚುವಂತೆ ಮಾಡಿದೆ ಎನ್ನುವುದನ್ನು ಸರ್ಕಾರವು ಚಿಂತಿಸಬೇಕು. ಈ ರೀತಿಯ ಅಸಮತೋಲನ ಏಕೆ? ಅದನ್ನು ಸರಿಪಡಿಸುವ ಕಡೆಗೆ ನಾವು ಚಿಂತಿಸುವ ನೆಲೆಯಿಂದ ಭವ್ಯ ಭಾರತ ಕನಸ್ಸನ್ನು ಕಟ್ಟುವ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಹೂಮಾಲೆ

ಇಳೆಯಲಿ ಹೂಗಳಿಹವು ಹಲವು
ಪರಿಮಳ ಹೊಂದಿರುವವು ಕೆಲವು
ನನಗೆ ಹೂವಿನ ಮೇಲೆ ಒಲವು
ಕಣ್ತುಂಬಿಕೊಂಡೆ ಹೂಗಳ ಚೆಲುವು

ಮನೆಯ ಹಿತ್ತಲಲ್ಲಿ ಅರಳಿತು ಮಲ್ಲಿಗೆ
ನಿಧಾನವಾಗಿ ಅವುಗಳ ಕೊಯ್ದೆ
ಮಾಲೆಗೆ
ಹೂಮಾಲೆ ತಯಾರಾಯಿತು ದಾರದ
ಜೊತೆಗೆ
ಏರಿತು ದೇವರ ಮುಡಿಗೆ

ಹೂ ಅರಳಿತು ನೇಸರನ ಸ್ಪರ್ಶದಿ
ಪರಿಮಳ ತುಂಬಿತು ಅಂಗಳದಿ
ದುಂಬಿಗಳು ಹೀರಿದವು ಮಕರಂದ
ಇವುಗಳ ನೋಡಲು ಮನಕಾನಂದ

ಮಳೆಗಾಲದಿ ಕಾಣಿಸುವುದು
ಕೆಲವೊಂದು
ಸೀತೆ ದಂಡೆಯು ಇದರಲ್ಲೊಂದು
ಮರದ ಮೇಲೆ ತೂಗಾಡುವುದು
ಸೃಷ್ಟಿಯ ಅದ್ಭುತಗಳಲ್ಲೊಂದು.

**ಸುವರ್ಣಾ ಭಟ್ಟ.**

### ಮೆರಗು

ವಿಜಯನಗರದ ಮೆರಗು ನಮ್ಮ ಹಂಪಿ
ಟೈಮ್ಸ್
ಕರ್ನಾಟಕದ ದಿನಪತ್ರಿಕೆಯ ಯುಗಕ್ಕೆ
ಹೊಸ ತಿರುವು ಕೊಟ್ಟ ನಮ್ಮ ಹಂಪಿ
ಟೈಮ್ಸ್

ವಿಶ್ವ ಪಾರಂಪರಿಕ ತಾಣದಲ್ಲಿ
ರಾರಾಜಿಸುತ್ತಿದೆ ನಮ್ಮ ಹಂಪಿ
ಅದಕ್ಕೆ ಮುಕುಟನಂತಿರುವ
ನಮ್ಮ ಹಂಪಿ ಟೈಮ್ಸ್

ಕಲ್ಲಿನ ರಥ ಹೇಳುತ್ತದೆ ನಮ್ಮ
ಸಾಂಸ್ಕೃತಿಕ ಪರಂಪರೆ
ಕರ್ನಾಟಕದ ಭಾರತದ ಜಗತ್ತಿನ ಬಗ್ಗೆ
ಸಾರುತ್ತಿದೆ ನಮ್ಮ ಹಂಪಿ ಟೈಮ್ಸ್

ವಿಜಯ ವಿಠ್ಠಲನ ಆರ್ಶೀವಾದ
ಉಗ್ರ ನರಸಿಂಹನ ರೂಪದಂತಿರುವ
ಅಂಕಣಗಳ ಪ್ರಸಾರ ನಮ್ಮ ಹಂಪಿ
ಟೈಮ್ಸ್

ವಿಜಯನಗರದ ಗತ ವೈಭವಕ್ಕೆ
ಮುನ್ನುಡಿಯಂತೆ ಕಂಗೊಳಿಸುತ್ತಿರುವ
ಅಕ್ಷರಗಳ ಸರಮಾಲೆಯ ಹಾರ ನಮ್ಮ
ಹಂಪಿ ಟೈಮ್ಸ್.

ಹೀಗೆ ಮುಂದುವರೆದು ಹಂಪಿ ಟೈಮ್ಸ್
ಜಗತ್ತಿನೆಲ್ಲೆಡೆ ಪಸರಿಸಲಿ ಎಂಬ ನಮ್ಮ
ಆಶಯ.

**ಚಿದಾನಂದ ಇ ಮಂಟೂರ**
**ಘೋಣಸಗಿ.ಜಿಲ್ಲೆ – ವಿಜಯಪುರ.**


### ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ವಿಶ್ವಾವಸು

**24–06–2025 – ಮಂಗಳವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ರೋಹಿಣಿ |
| ಯೋಗ | : ಶೂಲ |
| ಕರಣ | : ಶಕುನಿ |
| ಸೂರ್ಯೋದಯ | : 05:43:59 |
| ಸೂರ್ಯಾಸ್ತ | : 19:14:53 |
| ರಾಹು ಕಾಲ | : 15:52–17:34 |
| ಯಮಘಂಡ ಕಾಲ | : 09:07–10:48 |
| ಗುಳಿಕ ಕಾಲ | : 12:29–14:11 |

### ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 23–06–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1614.09 ಅಡಿ |
| ಒಳ ಹರಿವು | 21612 ಕ್ಯುಸೆಕ್ |
| ಹೊರ ಹರಿವು | 194 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 46.290 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1581.90 ಅಡಿ |
| ಒಳ ಹರಿವು | 655 ಕ್ಯುಸೆಕ್ |
| ಹೊರ ಹರಿವು | 1957 ಕ್ಯುಸೆಕ್ |
| ಸಾಮರ್ಥ್ಯ | 5.462 ಟಿಎಂಸಿ |

ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಸೂಚನೆ

# ಸಣ್ಣ ನೀರಾವರಿ, ನೀರಿನಾಸರೆಗಳ ಗಣತಿ ಕಾರ್ಯ ಅಚ್ಚುಕಟ್ಟಾಗಿರಲಿ



■ **ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲೆಯಲ್ಲಿನ ಸಣ್ಣ ನೀರಾವರಿ ಹಾಗೂ ನೀರಿನಾಸರೆಗಳ ಗಣತಿ ಕಾರ್ಯವನ್ನು ಅಚ್ಚುಕಟ್ಟಾಗಿ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ 7ನೇ ಸಣ್ಣ ನೀರಾವರಿ ಮತ್ತು 2ನೇ ನೀರಿನಾಸರೆಗಳ ಗಣತಿ ಕಾರ್ಯದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭಾರತ ಸರ್ಕಾರದ ಜಲ ಸಂಪನ್ಮೂಲ ಇಲಾಖೆಯ ಶೇ.100ರಷ್ಟು ಕೇಂದ್ರ ಸುರಕ್ಷಿತ ಸಣ್ಣ ನೀರಾವರಿ ಅಂಕಿ–ಅಂಶಗಳ ಸಮನ್ವಯೀಕರಣ ಯೋಜನೆ ಅಡಿಯಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ಸಣ್ಣ ನೀರಾವರಿ ಗಣತಿಯನ್ನು ಕೈಗೊಳ್ಳಲಾಗುತ್ತಿದೆ. ಜಿಲ್ಲೆಯಲ್ಲಿರುವ ಎಲ್ಲಾ ಸಣ್ಣ ನೀರಾವರಿ ಹಾಗೂ ನೀರಿನಾಸರೆಗಳ ಗಣತಿಯನ್ನು ಸಮರ್ಪಕವಾಗಿ ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಮಟ್ಟದಲ್ಲಿ ಗಣತಿ ಕಾರ್ಯ ಮಾಡುವ ಮೇಲ್ವಿಚಾಕರಿಗೆ ಮತ್ತು ತಾಲ್ಲೂಕು ಮಟ್ಟದಲ್ಲಿ ಗಣತಿ ಕಾರ್ಯ ಕೈಗೊಳ್ಳುವ ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಕಂದಾಯ ನಿರೀಕ್ಷಕರು ಗಣತಿ ಕಾರ್ಯ ವಿಧಾನದ ಕುರಿತು ಸೂಕ್ತ ತರಬೇತಿ ಹೊಂದಬೇಕು ಎಂದು ತಿಳಿಸಿದರು.

ಕಂದಾಯ ಇಲಾಖೆ, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆ, ಕೃಷಿ, ತೋಟಗಾರಿಕೆ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳಾದ ಮಹಾನಗರ ಪಾಲಿಕೆ, ಪುರಸಭೆ, ನಗರಸಭೆಗಳು

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
HAMPI TIMES VIJAYANAGARA
Only Admins can Send Messages to this Group
Join with Us

ರಾಜ್ಯದ ಹಿತದೃಷ್ಟಿಯಿಂದ ಈ ಎಲ್ಲಾ ಇಲಾಖೆಗಳ ಸಮನ್ವಯದೊಂದಿಗೆ ಗಣತಿ ಕ್ಷೇತ್ರ ಕಾರ್ಯ ಕೈಗೊಳ್ಳುವಂತೆ ಜಿಲ್ಲಾಧಿಕಾರಿಯವರು ತಿಳಿಸಿದರು.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಪತ್ರಿಬಸಪ್ಪ ಅವರು ಮಾತನಾಡಿ, ಪ್ರಸ್ತುತ 2023–24ನೇ ವರ್ಷವನ್ನಾಧರಿಸಿ 7ನೇ ಸಣ್ಣ ನೀರಾವರಿ ಹಾಗೂ 2ನೇ ನೀರಿನಾಸರೆಗಳ ಗಣತಿಯನ್ನು ಡಿಜಿಟಲ್ ಮೋಡ್ ನೊಂದಿಗೆ ಪ್ರಥಮ ಬಾರಿಗೆ ಮೊಬೈಲ್ ಆಪ್ ಬಳಸಿ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಗಣತಿ ಕಾರ್ಯಕ್ಕೆ ತಾಲ್ಲೂಕು ಮಟ್ಟದಲ್ಲಿ ಸಂಬಂಧಪಟ್ಟ ಸಿಬ್ಬಂದಿಗೆ ತರಬೇತಿ ಏರ್ಪಡಿಸಲಾಗುವುದು ಎಂದರು.

ಅಂತರ್ಜಲ ಯೋಜನೆಗಳು ಹಾಗೂ ಮೇಲ್ಮೈ ಜಲ ಯೋಜನೆಗಳು ಎಂದು ವರ್ಗೀಕರಿಸಲಾಗಿದೆ. 40 ಹೆಕ್ಟೇರ್‌ವರೆಗಿನ ಅಚ್ಚುಕಟ್ಟು ಇರುವ ಯೋಜನೆಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿರುತ್ತದೆ. 40 ಹೆಕ್ಟೇರ್‌ಗಳಿಗೆ ಮೇಲಿನ 2 ಸಾವಿರ ಹೆಕ್ಟೇರ್‌ವರೆಗಿನ ಅಚ್ಚುಕಟ್ಟು ಇರುವ ಯೋಜನೆಗಳು ಸಣ್ಣ ನೀರಾವರಿ ಇಲಾಖೆಯ ಅಧೀನದಲ್ಲಿರುತ್ತವೆ. 2ಸಾವಿರ ಹೆಕ್ಟೇರ್‌ಗಳಿಗೆ ಮೇಲಿನ ಅಚ್ಚುಕಟ್ಟು ಇರುವ ಯೋಜನೆಗಳು ಬೃಹತ್ ನೀರಾವರಿ ಇಲಾಖೆಯ ಅಧೀನದಲ್ಲಿರುತ್ತವೆ ಎಂದು ತಿಳಿಸಿದರು.

ಅಂತರ್ಜಲ ಯೋಜನೆಗಳನ್ನು 4 ವಿಧಗಳಾಗಿ ಅಗೆದ ಬಾವಿ, ಆಳವಲ್ಲದ ಕೊಳವೆ ಬಾವಿ, ಮಧ್ಯಮ ಆಳದ ಕೊಳವೆ ಬಾವಿ ಮತ್ತು ಆಳದ ಕೊಳವೆ ಬಾವಿಗಳಾಗಿ ವರ್ಗೀಕರಿಸಲಾಗಿದೆ ಹಾಗೂ ನೀರಿನಾಸರೆಯ ವಿಧಗಳು, ಹೊಂಡಗಳು, ಸರೋವರಗಳು ಕೆರೆಗಳ, ಜಲಾಶಯಗಳು, ಜಲಸಂರಕ್ಷಣಾ ಯೋಜನೆಗಳಾಗಿವೆ ಎಂದರು.

ಬಳಿಕ ಗಣತಿ ಕಾರ್ಯದ ಕುರಿತು ತರಬೇತಿ ನೀಡಿದರು.

ಈ ಸಂದರ್ಭದಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಕಾರ್ಯಪಾಲಕ ಅಭಿಯಂತರಾದ ಆರ್. ವೆಂಕಟೇಶ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರಾದ ಇಂಧುದರ, ಕೃಷಿ ಇಲಾಖೆಯ ಉಪನಿರ್ದೇಶಕ ಮಂಜುನಾಥ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಮತ್ತಿತರರು ಉಪಸ್ಥಿತರಿದ್ದರು.

## ಶಿಕ್ಷಕ ಗಂಗಾನಹಳ್ಳಿ ಜಗದೀಶಗೆ
### ಡಾರ್ವಿನ್ ವಿಜ್ಞಾನ ಶಿಕ್ಷಕ ಪ್ರಶಸ್ತಿ ಪ್ರದಾನ



ರಾಜ್ಯಮಟ್ಟದ ಡಾರ್ವಿನ್ ಸಮಾವೇಶದಲ್ಲಿ ಧಾರವಾಡದ ಐಐಟಿಯ ಖ್ಯಾತ ವಿಜ್ಞಾನಿ ಡಾ. ಎಸ್. ಎಂ.ಶಿವಪ್ರಸಾದ್ ಅವರು ಡಾರ್ವಿನ್ ವಿಜ್ಞಾನ ಶಿಕ್ಷಕ ಪ್ರಶಸ್ತಿಯನ್ನು ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕಿನ ಗಂಗಾನಹಳ್ಳಿ ಜಗದೀಶ ಶಿಕ್ಷಕರಿಗೆ ಪ್ರದಾನ ಮಾಡಿದರು.

## ಜೂ.24, 25 ರಂದು ಅಂಚೆ ಕಚೇರಿಗಳಲ್ಲಿ ವಹಿವಾಟು ಸ್ಥಗಿತ

■ **ಹಂಪಿ ಟೈಮ್ಸ್ ಹೊಸಪೇಟೆ**
ಹೊಸಪೇಟೆ ಪ್ರಧಾನ ಕಚೇರಿ ವ್ಯಾಪ್ತಿಗೆ ಬರುವ ಎಲ್ಲಾ ಉಪ ಅಂಚೆ ಕಚೇರಿ ಹಾಗೂ ಶಾಖಾ ಅಂಚೆ ಕಚೇರಿಗಳಲ್ಲಿ ಹೊಸ ಎ.ಪಿ.ಟಿ 2.0 ತಂತ್ರಾಂಶ ಅಳವಡಿಕೆ ಜಾರಿಯಾಗುತ್ತಿರುವ ಹಿನ್ನಲೆಯಲ್ಲಿ ಎರಡು ದಿನಗಳ ಕಾಲ ಅಂಚೆ ಕಚೇರಿಗಳಲ್ಲಿ ವಹಿವಾಟುಗಳನ್ನು ಸ್ಥಗಿತಗೊಳಿಸಲಾಗುವುದು ಎಂದು ಅಂಚೆ ಅಧೀಕ್ಷಕ ಪಿ.ಚಿದಾನಂದ ಅವರು ತಿಳಿಸಿದ್ದಾರೆ.

ಭಾರತೀಯ ಅಂಚೆ ಇಲಾಖೆಯು ಆಧುನಿಕ ಹಾಗೂ ಗ್ರಾಹಕ ಸ್ನೇಹಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ, ಆಧುನಿಕ ತಂತ್ರಜ್ಞಾನದ ನೆಟ್ವರ್ಕ್ ಸಮಸ್ಯೆಯಂತಹ ತೊಡಕುಗಳಿಂದ ಗ್ರಾಹಕರ ಸೇವೆಗಳಿಗೆ ಚ್ಯುತಿ ಬರದಂತೆ ಗಮನಹರಿಸಿ ಅಡ್ವಾನ್ಸ್ ಪೋಸ್ಟಲ್ ಟೆಕ್ನಾಲಜಿ 2.0 (ಎ.ಪಿ.ಟಿ 2.0) ಯನ್ನು ದೇಶಾದ್ಯಂತ ಎಲ್ಲಾ ಅಂಚೆ ಕಚೇರಿಗಳಲ್ಲಿ ಅಳವಡಿಸಲು ಮುಂದಾಗಿದೆ. ಬಳ್ಳಾರಿ ಅಂಚೆ ವಿಭಾಗದ ಹೊಸಪೇಟೆ ಪ್ರಧಾನ ಅಂಚೆ ಕಚೇರಿ, ಹಾಗೂ ಅದರ ಅಡಿಯಲ್ಲಿ ಬರುವ ಎಲ್ಲಾ ಉಪ ಅಂಚೆ ಕಚೇರಿಗಳು ಮತ್ತು ಶಾಖಾ ಅಂಚೆ ಕಚೇರಿಗಳಲ್ಲಿ ಎ.ಪಿ.ಟಿ 2.0 ತಂತ್ರಾಂಶವನ್ನು ಅಳವಡಿಸಲು ಮುಂದಾಗಿದೆ.

ಈ ಚಟುವಟಿಕೆಯ ಪೂರ್ವಭಾವಿಯಾಗಿ ಬಳ್ಳಾರಿ ಅಂಚೆ ವಿಭಾಗದ ವ್ಯಾಪ್ತಿಗೆ ಬರುವ ಹೊಸಪೇಟೆ ಪ್ರಧಾನ ಅಂಚೆ ಕಚೇರಿ, ಹೊಸಪೇಟೆ ನಗರದಲ್ಲಿರುವ ಇತರೆ ಎಲ್ಲಾ ಅಂಚೆ ಕಚೇರಿಗಳು, ಅರಸೀಕೆರೆ, ಚಿಗಟೇರಿ, ಚಿತ್ತವಾಡಗಿ, ಚೋರನೂರು, ಚಿಕ್ಕಜೋಗಿಹಳ್ಳಿ, ದೇವಲಾಪುರ, ಹಗರಿಬೊಮ್ಮನಹಳ್ಳಿ, ಹಂಪಸಾಗರ, ಹಂಪಿ, ಹಂಪಿ ಪವರ್ ಹೌಸ್, ಹೊಸಪೇಟೆ ಎನ್‌ಸಿ ಕಾಲೋನಿ, ಹೊಸಹಳ್ಳಿ, ಹೊಳಲು, ಹೂವಿನಹಡಗಲಿ, ಹಿರೇಹಡಗಲಿ, ಹರಪನಹಳ್ಳಿ, ಹಲವಾಗಲು, ಇಟ್ಟಿಗಿ, ಕಮಲಾಪುರ, ಕಂಪ್ಲಿ, ಕೂಡ್ಲಿಗಿ, ಕೊಟ್ಟೂರು, ಕೆ.ಯು ಕ್ಯಾಂಪಸ್, ಮರಿಯಮ್ಮನಹಳ್ಳಿ, ಉಜ್ಜಿನಿ, ಪಾಪಿನಾಯಕನಹಳ್ಳಿ, ತಂಬ್ರಹಳ್ಳಿ, ತೆಲಿಗಿ, ಟಿ.ಬಿ.ಡ್ಯಾಮ್, ಗುಡೇಕೋಟೆ ಉಪ ಅಂಚೆ ಕಚೇರಿಗಳು ಹಾಗೂ ಸಂಬಂಧಿತ ಶಾಖಾ ಅಂಚೆ ಕಚೇರಿಗಳಲ್ಲಿ ಜೂನ್ 24 ಮತ್ತು 25 ರಂದು ಯಾವುದೇ ವ್ಯವಹಾರ, ವಹಿವಾಟು ಇರುವುದಿಲ್ಲ. ಹಾಗಾಗಿ ಅಂಚೆ ಕಚೇರಿಯ ಗ್ರಾಹಕರು ಸಹಕರಿಸಬೇಕಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವೃತ್ತಿಪರ ತರಬೇತಿ ಕೋರ್ಸ್‌ಗಳಿಗೆ ಶಿಷ್ಯವೇತನ, ತರಬೇತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**
2024–25ನೇ ಸಾಲಿನಲ್ಲಿ ಐ.ಐ.ಎಸ್.ಸಿ, ಐ.ಐ.ಟಿ ಮತ್ತು ಎನ್.ಐ.ಟಿ ಸಂಸ್ಥೆಗಳ ಮೂಲಕ ಕೃತಕ ಬುದ್ಧಿಮತ್ತೆಮತ್ತುಯಂತ್ರಕಲಿಕೆ(ಅರ್ಟಿಫಿಷಿಯಲ್ ಇಂಟಲಿಜೆನ್ಸಿ ಮತ್ತು ಮೆಷನ್ ಲರ್ನಿಂಗ್) ವೃತ್ತಿಪರ ತರಬೇತಿ ಕೋರ್ಸ್‌ಗಳಿಗೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಮತ್ತು ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಪಂಗಡದ 200 ಇಂಜಿನಿಯರಿಂಗ್ ಪದವಿಧರರಿಗೆ ರೂ.15,000 ಶಿಷ್ಯವೇತನ ಹಾಗೂ ತರಬೇತಿಯನ್ನು ನೀಡಲಾಗುವುದು. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಜಿಲ್ಲೆಯ ಮೂಲನಿವಾಸಿ ಮತ್ತು ಅಲೆಮಾರಿ, ಅರೆ ಅಲೆಮಾರಿ ಮತ್ತು ಸೂಕ್ಷ್ಮ, ಅತಿ ಸೂಕ್ಷ್ಮ ಪರಿಶಿಷ್ಟ ಪಂಗಡದ ಯುವಕ, ಯುವತಿಯರಿಗೆ ಕೃತಕ ಬುದ್ಧಿಮತ್ತೆಮತ್ತುಯಂತ್ರಕಲಿಕೆ(ಅರ್ಟಿಫಿಷಿಯಲ್ ಇಂಟಲಿಜೆನ್ಸಿ ಮತ್ತು ಮೆಷನ್ ಲರ್ನಿಂಗ್) ತರಬೇತಿ ಹಾಗೂ ಶಿಷ್ಯವೇತನವನ್ನು ನೀಡಲಾಗುವುದು.

**ಷರತ್ತುಗಳು :–**
ಅರ್ಜಿ ಸಲ್ಲಿಸಲು ಜುಲೈ.04 ಕೊನೆಯ ದಿನಾಂಕವಾಗಿರುತ್ತದೆ. ಅಭ್ಯರ್ಥಿಯು ಕರ್ನಾಟಕ ರಾಜ್ಯದ ಮೂಲ ನಿವಾಸಿಯಾಗಿರಬೇಕು ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು. ರಾಜ್ಯ, ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದಿರುವ ವಿಶ್ವವಿದ್ಯಾಲಯಗಳಲ್ಲಿ ಬಿಇ, ಬಿ.ಟೆಕ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಶಿಷ್ಯವೇತನಕ್ಕೆ ಅರ್ಹರಾಗಿರುತ್ತಾರೆ, ಅಭ್ಯರ್ಥಿಯು ಬಿಇ, ಬಿ.ಟೆಕ್ ಕೋರ್ಸ್‌ಗಳಲ್ಲಿ ಕನಿಷ್ಟ ಶೇ.55 ರಷ್ಟು ಕಡ್ಡಾಯವಾಗಿ ಅಂಕಗಳಿಸಿರಬೇಕು, ಕೋರ್ಸ್ ಅವಧಿಯು ಗರಿಷ್ಟ 02 ವಾರಗಳಾಗಿರಬೇಕು, ಯೋಜನೆಯಡಿ ಶಿಷ್ಯ ವೇತನ ಪಡೆಯಲು ಪದವಿ ಪೂರೈಸಿದ 5 ವರ್ಷದ ಒಳಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು, ಅಭ್ಯರ್ಥಿಯ ಕುಟುಂಬದ ಅದಾಯ ರೂ.5 ಲಕ್ಷ ಮೀರಬಾರದು, ಮೂಲನಿವಾಸಿ ಮತ್ತು ಅಲೆಮಾರಿ, ಅರೆ ಅಲೆಮಾರಿ ಮತ್ತು ಸೂಕ್ಷ್ಮ, ಅತಿ ಸೂಕ್ಷ್ಮ ಪರಿಶಿಷ್ಟ ಪಂಗಡದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು, ಐಐಎಸ್‌ಸಿ, ಐಐಟಿ ಮತ್ತು ಎನ್.ಐ.ಟಿ ಸಂಸ್ಥೆಗಳ ಹೊರತುಪಡಿಸಿ ಬೇರೆ ವಿದ್ಯಾಸಂಸ್ಥೆಗಳಲ್ಲಿ ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ಶಿಷ್ಯವೇತನ ಪಡೆಯಲು ಅರ್ಹರಿರುವುದಿಲ್ಲ.

**ಸಂಪರ್ಕದ ವಿವರ :–**
ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಹೊಸಪೇಟೆ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಕೂಡ್ಲಿಗಿ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಹರಪನಹಳ್ಳಿ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಹಗರಿಬೊಮ್ಮನಹಳ್ಳಿ ತಾಲೂಕಿನ ಸಹಾಯಕ ನಿರ್ದೇಶಕರು, ಹಡಗಲಿಯ ಸಹಾಯಕ ನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

## ಮೀನುಗಾರಿಕೆ ಇಲಾಖೆ: ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**
2025–26ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ವತಿಯಿಂದ ರಾಜ್ಯ ವಲಯ ಯೋಜನೆಗಳಡಿ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಯೋಜನೆಗಳು:– ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ ಯೋಜನೆಯಡಿ ಸಹಾಯಧನ ನೆರವು, ಮೀನುಮರಿ ಖರೀದಿಸಲು ನೆರವು ಯೋಜನೆ, ಕೆರೆ, ಜಲಾಶಯಗಳ ಅಂಚಿನ ಕೊಳಗಳಲ್ಲಿ ಮೀನುಮರಿ ಪಾಲನೆಗೆ ನೆರವು. ಅರ್ಜಿ ಸಲ್ಲಿಸಲು ಅಗತ್ಯ ದಾಖಲೆಗಳೊಂದಿಗೆ ಆಯಾ ತಾಲೂಕಿನ ಮೀನುಗಾರಿಕೆ ಇಲಾಖಾ ಕಚೇರಿಗಳಿಗೆ ಜುಲೈ.15 ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಕೊಟ್ಟೂರು, ಹರಪನಹಳ್ಳಿಯ ಮೀನುಗಾರಿಕೆ ಸಹಾಯಕ ನಿರ್ದೇಶಕ ಮಂಜುನಾಥ ಅವರ ಮೊ. 8217725319, ಹೊಸಪೇಟೆ ಮತ್ತು ಹಡಗಲಿಯ ಮೀನುಗಾರಿಕೆ ಸಹಾಯಕ ನಿರ್ದೇಶಕ ಶಾಂತಕುಮಾರ್ ಅವರ ಮೊ.9620177588 ಗೆ ಸಂಪರ್ಕಿಸಬಹುದು ಎಂದು ಮೀನುಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲೆಯ ಮೂಲಕ ಕಲಿಕೆ ಮಕ್ಕಳ ಸರ್ವಾಂಗೀಣ ಅಭಿವೃದ್ಧಿ

### ಸಂಪನ್ಮೂಲ ವ್ಯಕ್ತಿ ಜೆ.ಎನ್.ಈಶ್ವರ ಹೇಳಿಕೆ । ವಿದ್ಯಾರ್ಥಿಗಳಿಗೆ ಕಲಿಕೆ ಮೂಲಕ ಕಾರ್ಯಾಗಾರ




■ **ಹಂಪಿ ಟೈಮ್ಸ್ ಹೊಸಪೇಟೆ**
ಕಲೆಯ ಮೂಲಕ ಕಲಿಕಾ ಶಿಕ್ಷಣವು ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ. ಇದು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಮತ್ತು ಕಲಿಕೆಯನ್ನು ಹೆಚ್ಚು ಪರಿಣಾಮ ಕಾರಿಯಾಗಿಸಲು ನೆರವಾಗುತ್ತದೆ ಎಂದು ಸಂಪನ್ಮೂಲ ವ್ಯಕ್ತಿ ಜೆ.ಎನ್.ಈಶ್ವರ ಹೇಳಿದರು.

ನಗರದ ಡಾನ್ ಬಾಸ್ಕೊ ಶಾಲೆಯಲ್ಲಿ 6ನೆಯ ತರಗತಿಯಿಂದ 9 ನೆಯ ತರಗತಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ "ಕಲೆಯ ಮೂಲಕ ಕಲಿಕಾ" ಕಾರ್ಯಾಗಾರದಲ್ಲಿ ಮಾತನಾಡಿದರು.

ಮಕ್ಕಳಲ್ಲಿ ಕಲಿಕಾ ಸವಾಲುಗಳನ್ನು ನಿವಾರಿಸಿ, ಈ ವಿಧಾನವನ್ನು ವ್ಯಾಪಕವಾಗಿ ಅಳವಡಿಸಿಕೊಂಡರೆ ನಮ್ಮ ಮುಂದಿನ ಪೀಳಿಗೆ ಹೆಚ್ಚು ಸೃಜನ ಶೀಲ, ವಿಮರ್ಶಾತ್ಮಕ ಮತ್ತು ಸಮರ್ಥ ನಾಗರಿಕರಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ. ಶಿಕ್ಷಣದಲ್ಲಿ ಕಲೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದು, ಭವಿಷ್ಯದ ಕಲಿಕಾ ಪ್ರಕ್ರಿಯೆಯನ್ನು ಪರಿವರ್ತಿಸಲು ಅತ್ಯಗತ್ಯವಾಗಿದೆ ಎಂದರು.

ಸ್ಥಳೀಯ ಮೌಲಾನಾ ಆಜಾದ್ ಶಾಲೆ, ಆದರ್ಶ ವಿದ್ಯಾಲಯ, ಡಾ. ಎಪಿಜೆ ಅಬ್ದುಲ್ ಕಲಾಂ ಶಾಲೆ, ಸರ್ದಾರ್ ವಲ್ಲಭಾಭಾಯ್ ಶಾಲೆ ಮತ್ತು ವಾಲ್ಮೀಕಿ ಪ್ರೌಢಶಾಲೆಯ ಸುಮಾರು 40ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ಮಕ್ಕಳು ಸಕ್ರಿಯವಾಗಿ ಭಾಗವಹಿಸಿ ಶಿಬಿರದ ಪ್ರಯೋಜನ ಕುರಿತು ತಮ್ಮ ಅನುಭವ ಹಂಚಿಕೊಂಡರು.

ಕಾರ್ಯಕ್ರಮ ಆಯೋಜಿಸಿದ ಡಾನ್ ಬಾಸ್ಕೊ ಶಾಲೆಯ ಮುಖ್ಯ ಸಂಯೋಜಕರಾದ ಫಾದರ್ ಫ್ರಾನ್ಸಿಸ್ ಮತ್ತು ಸಹಾಯಕರಾದ ಭವ್ಯ ಹಾಗು ಸುರೇಶ್, ಶಿಕ್ಷಕರು ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು.

For Advertisements
Contact: 9448633038

**ಕರ್ನಾಟಕ ಸರ್ಕಾರ**
**ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ**
ಕಮಲಾಪುರ. ದೂರವಾಣಿ: 08394–241661
e-mail ID: hwhama@gmail.com
ಸಂಖ್ಯೆ:ಹವಿಪಪ್ರನಿಪ್ರಾ/ಕ/ಬಾವಾ/2025–26 ದಿನಾಂಕ:23–06–2025

**ಇ–ಟೆಂಡರ್ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯಲ್ಲಿ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಈ ಕೆಳಗಿನ ಇ–ಟೆಂಡರ್‌ಅನ್ನು ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಕಮಲಾಪುರ ಇವರ ಕಛೇರಿಗೆ, ಕಛೇರಿ ಅವಧಿಗೆ ಸಂಪರ್ಕಿಸಬಹುದಾಗಿದೆ.

ಇ–ಟೆಂಡರ್ ಇಂಡೆಂಟ್ ನಂ: **HWHAMA/2025-26/SE0006**
ವಿವರ: Tender Notice for Service & Repair of Battery Operated Buggies for HWHAMA. ಅಂದಾಜು ಮೊತ್ತ (ರೂ.ಗಳಲ್ಲಿ): 16,25,000/–. ಇಎಂಡಿ ಮೊತ್ತ (ರೂ.ಗಳಲ್ಲಿ): 32500/–. ಅವಧಿ: 01 – Month
ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.
ವಿವರ: 1.Last Date of Tender Queries/Clarifications: **30.06.2025, 12.00pm.** 2.Last Date and Time for Receipt of Tenders: **08.07.2025, 17.00PM.** 3.Date and Time for Opening of Financial Bid: **09.07.2025, 17.30PM**

ಸಹಿ/–ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ
ನಿರ್ವಹಣಾ ಪ್ರಾಧಿಕಾರ ಕಮಲಾಪುರ
ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/115

• Admissions
• Requirements
• Firm Branding
• Public Notice
• Change of Name


"Thousands of eyes, one newspaper. 'Hampi Times' delivers your message directly to Hampi Times engaged readers."

HAMPI TIMES Kannada Daily
Print & Digital News Paper
BOOK NOW! Scan to Read

• Obituary
• Remembrance
• Birthday wish ads
• Events Display &
• Classified ads

# HAMPI TIMES, Bamboo Bazaar, Nr Valmiki Circle, Hosapete-583201, Vijayanagara Dist. 9482599089 / 9448633038

## ಆನಂದ ಬಾಣ




# ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಲು ಸಿಎಂ ಸೂಚನೆ

## ರಾಯಚೂರ ಗ್ರಾಮೀಣ ಕ್ಷೇತ್ರದಲ್ಲಿ 936.00 ಕೋಟಿ ರೂ.ಗಳ ವೆಚ್ಚದ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ

**ಹಂಪಿ ಟೈಮ್ಸ್ ರಾಯಚೂರ**

ರಾಜ್ಯ ಸರ್ಕಾರವು ಜನತೆಗೆ ವಚನ ಕೊಟ್ಟಂತೆ ನಡೆದುಕೊಂಡ ಸರ್ಕಾರ ನಮ್ಮದು. ಜನರ ಹೊಟ್ಟೆ ತುಂಬಿಸುವ ಅನ್ನಭಾಗ್ಯ ಯೋಜನೆ, ಜನರ ಜೀವನಕ್ಕೆ ಆರ್ಥಿಕ ಸಹಾಯ ಮಾಡುವ ಗೃಹಲಕ್ಷ್ಮಿ, ಗೃಹಜ್ಯೋತಿ ಸೇರಿದಂತೆ ಮಹತ್ವದ ಎಲ್ಲ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿದ್ದೇವೆ ಎಂದು ಸಿಎಂ ಸಿದ್ಧರಾಮಯ್ಯ ಹೇಳಿದರು.

ರಾಯಚೂರು ತಾಲೂಕಿನ ಯರಗೇರಾ ಗ್ರಾಮದ ಶ್ರೀ ರಂಗನಾಥ ಸ್ವಾಮಿ ದೇವಸ್ಥಾನದ ಹತ್ತಿರ ಜೂನ್ 23ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಇವರ ವತಿಯಿಂದ ನಡೆದ ಬುಡಕಟ್ಟು ಸಾಂಸ್ಕೃತಿಕ ಉತ್ಸವ ಹಾಗೂ 371(ಜೆ) ದಶಮಾನೋತ್ಸವ ಮತ್ತು 936.00 ಕೋಟಿ ರೂ.ಗಳ ವೆಚ್ಚದಲ್ಲಿ ವಿವಿಧ ಕಾಮಗಾರಿಗಳ ಅಡಿಗಲ್ಲು ಹಾಗೂ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಗಳಿಗೆ ನಾವು ಬಜೆಟನಲ್ಲಿ ಅನುದಾನ ಮೀಸಲಿರಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದೇವೆ. ಅಧಿಕಾರಕ್ಕೆ ಬಂದು ಎರಡು ವರ್ಷದ ಅವಧಿಯಲ್ಲಿ ನಾವು ಅಂದಾಜು 90,000 ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗೆ ಖರ್ಚು ಮಾಡಿದ್ದೇವೆ. ಚುನಾವಣಾ ಸಂದರ್ಭದಲ್ಲಿ ರಾಜ್ಯ ಸರ್ಕಾರವು 560ಕ್ಕೂ ಹೆಚ್ಚು ಭರವಸೆ ನೀಡಿದ ಪೈಕಿ ನಾವು ಈ ಎರಡು ವರ್ಷಗಳ ಅವಧಿಯಲ್ಲಿ ಈಗಾಗಲೇ 242 ಭರವಸೆಗಳನ್ನು ಈಡೇರಿಸಿದ್ದೇವೆ. ಇನ್ನು ಮೂರ ವರ್ಷದಲ್ಲಿ ಇನ್ನುಳಿದ ಭರವಸೆಗಳನ್ನು ಸಹ ಈಡೇರಿಸುತ್ತೇವೆ ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕದ ಭಾಗವು ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ಹಿಂದುಳಿದಿದೆ. ಇದು ಸರಿ ಆಗಬೇಕು. ರಾಜ್ಯ ಸರ್ಕಾರವು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಸಾವಿರಾರು ಕೋಟಿ ರೂ ಗಳನ್ನು ನೀಡುತ್ತಿದೆ. ರಾಯಚೂರ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಪ್ರದೇಶಕ್ಕೆ ಶಿಕ್ಷಣ, ಆರೋಗ್ಯ, ಉದ್ಯೋಗ ಕ್ಷೇತ್ರಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಅನುದಾನ ಕೊಡಬೇಕು ಎಂದು ಕೆಕೆಆರ್‌ಡಿಬಿ ಅಧ್ಯಕ್ಷರಿಗೆ ತಿಳಿಸಿದ್ದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಮಾತನಾಡಿ, ಮಹತ್ವದ 371 (ಜೆ) ಜಾರಿ ಮೂಲಕ, ಹಿಂದುಳಿದ ಭಾಗದ ಜನತೆಗೆ ಅನುಕೂಲ ಕಲ್ಪಿಸಲು ಶ್ರಮಿಸಿದ ಹಿರಿಯರಾದ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ನಮ್ಮ ಭಾಗದ ಅನೇಕ ಮಹನಿಯರು ನಮಗೆ ಕಾಮಧೇನು ಮತ್ತು ಕಲ್ಪವೃಕ್ಷ ಆಗಿದ್ದಾರೆ. 371 (ಜೆ) ಜಾರಿಯಿಂದಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ನಮ್ಮ ಸಾಧನೆ ಅನನ್ಯವಾಗಿದೆ. 371(ಜೆ) ವಿಶೇಷ ಸ್ಥಾನಮಾನ ಜಾರಿಯಿಂದಾಗಿ ಈ ಭಾಗದಲ್ಲಿ ಎಲ್ಲರಿಗೂ ರಕ್ಷಣೆ





ಸಿಗುವಂತಾಗಿದೆ. ಈ ಮೀಸಲು ಸೌಕರ್ಯ ಪಡೆದು ಈ ಭಾಗದ 9 ಸಾವಿರ ಮಕ್ಕಳು ಡಾಕ್ಟರ್ ಆಗಿದ್ದಾರೆ. ಇದೇ ರೀತಿ ಅನೇಕರು ನೌಕರಿ ಗಿಟ್ಟಿಸಿದ್ದಾರೆಂಬುದು ಸಣ್ಣ ಸಾಧನೆಯಲ್ಲ. ಈ ಭಾಗದ ಎಲ್ಲ ಹುದ್ದೆಗಳಲ್ಲಿ ಶೇ.75 ಹುದ್ದೆಗಳು ನಮ್ಮ ಭಾಗದ ಜನತೆಗೆ ದಕ್ಕಿದೆ. ಇದು ಬಹುದೊಡ್ಡ ಸಾಮಾಜಿಕ ಬದಲಾವಣೆ ಆಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಮಾತನಾಡಿ, ರಾಜ್ಯದಲ್ಲಿ ನಮ್ಮ ಸರ್ಕಾರವು 5 ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಜಾರಿ ಮಾಡಿ ಜನಪರವಾಗಿ ಕೆಲಸ ಮಾಡುತ್ತಿದೆ. ರಾಯಚೂರ ಜಿಲ್ಲೆಯಲ್ಲಿ ಎರಡು ನದಿಗಳು ಹರಿದಿವೆ. ಆದಾಗ್ಯೂ ರಾಯಚೂರ ಗ್ರಾಮೀಣ ಪ್ರದೇಶದ ನನ್ನ ರೈತಾಪಿ ಜನರಿಗೆ ನೀರು ಸಿಗುತ್ತಿಲ್ಲ. ಮೇಲಿನ ನೀರು ನಮಗು ಸಹ ನ್ಯಾಯಯುತವಾಗಿ ಸಿಗಬೇಕು. ರಾಯಚೂರ ಗ್ರಾಮೀಣ ಕ್ಷೇತ್ರದಲ್ಲಿ ಈಗಾಗಲೇ ನೀರು ಎತ್ತುವ ಎರಡು ಯೋಜನೆಗಳು ಅನುಷ್ಠಾನವಾಗುತ್ತಿವೆ. ಇನ್ನು ಮೂರು ನೀರು ಎತ್ತುವ ನೀರಾವರಿ ಯೋಜನೆಗಳಿಗೆ ಡಿಪಿಆರ್ ಆಗಿದೆ ಎಂದರು.

ನಮ್ಮ ಭಾಗಕ್ಕೆ 371(ಜೆ) ಮೀಸಲು ಸ್ಥಾನಮಾನ ಲಭ್ಯವಾಗಿದ್ದರಿಂದಾಗಿ ನಮ್ಮ ಭಾಗದ ಜನರು ಉದ್ಯೋಗವಕಾಶ ಪಡೆಯುವಂತಾಗಿದೆ. ಇದರ ಸ್ಮರಣಾರ್ಥ ದಶಮಾನೋತ್ಸವ ಸಂಚಿಕೆ ಪ್ರಕಟಿಸಿ ಬಿಡುಗಡೆ ಮಾಡಿದ್ದೇವೆ. ರಾಯಚೂರ ಗ್ರಾಮೀಣ ಪ್ರದೇಶಕ್ಕೆ ಸೂಕ್ತ ನ್ಯಾಯಸಿಗುವ ನಿಟ್ಟಿನಲ್ಲಿ ಈ ಪ್ರದೇಶವನ್ನು ತಾಲೂಕು ಕೇಂದ್ರ ಎಂದು ಘೋಷಿಸಬೇಕು. ದೇವಸಗೂರನ್ನು ನಗರಸಭೆಯಾಗಿ ಮೇಲ್ದರ್ಜೆಗರಿಸಬೇಕು ಎಂದು ಶಾಸಕರು ಇದೆ ವೇಳೆ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು.

**ಫಲಾನುಭವಿಗಳಿಗೆಹಕ್ಕುಪತ್ರವಿತರಣೆ:** ಕಾರ್ಯಕ್ರಮದಲ್ಲಿ ವಿವಿಧ ಯೋಜನೆಗಳಡಿ ಫಲಾನುಭವಿಗಳಿಗೆ ಮುಖ್ಯಮಂತ್ರಿಗಳು ಹಾಗೂ ಸಚಿವರು, ಶಾಸಕರು ಸಾಂಕೇತಿಕವಾಗಿ ಸೌಲಭ್ಯ ವಿತರಿಸಿದರು. ಭೂ ಒಡೆತನ ಯೋಜನೆಯ ಹಕ್ಕುಪತ್ರ, ಪ್ರೇರಣಾ ಯೋಜನೆಯ ಯೋಜನಾ ಮಂಜೂರಾತಿ ಆದೇಶ ಪತ್ರ ಸೇರಿದಂತೆ ನಾನಾ ಸೌಕರ್ಯಗಳ ಮಂಜೂರಾತಿ ಆದೇಶ ಪತ್ರಗಳನ್ನು ವಿತರಿಸಲಾಯಿತು.

ಸಮಾರಂಭದಲ್ಲಿ ವಿರೋಧ ಪಕ್ಷದ ನಾಯಕರು ಹಾಗೂ ಸಂಸದರಾದ (ರಾಜ್ಯ ಸಭೆ) ಡಾ.ಮಲ್ಲಿಕಾರ್ಜುನ ಖರ್ಗೆ, ಕಾನೂನು, ನ್ಯಾಯ, ಮಾನವ ಹಕ್ಕುಗಳ, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆಯ ಸಚಿವರಾದ ಡಾ.ಹೆಚ್.ಕೆ.ಪಾಟೀಲ, ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಚಿವರಾದ ಎನ್.ಎಸ್.ಭೋಸರಾಜು, ಉನ್ನತ ಶಿಕ್ಷಣ ಇಲಾಖೆ ಸಚಿವರಾದ ಡಾ.ಎಂ.ಸಿ. ಸುಧಾಕರ್, ಲೋಕೋಪಯೋಗಿ ಇಲಾಖೆ ಸಚಿವರಾದ ಸತೀಶ್ ಜಾರಕಿಹೊಳಿ, ಇಂಧನ ಸಚಿವರಾದ ಕೆ.ಜೆ.ಜಾರ್ಜ್, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಇಲಾಖೆ ಸಚಿವರಾದ ಶರಣಬಸಪ್ಪ ದರ್ಶನಾಪೂರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ ತಂಗಡಗಿ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಡಾ.ಅಜಯ್ ಧರ್ಮಸಿಂಗ್, ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಕಲಬುರಗಿ ವಿಭಾಗದ ಉಪಾಧ್ಯಕ್ಷರಾದ ಎಸ್.ಆರ್.ಮೆಹರೋಜ್‌ಖಾನ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಯಾದಗಿರಿ ಶಾಸಕರಾದ ಚೆನ್ನಾರೆಡ್ಡಿ ಪಾಟೀಲ ತನ್ನೂರ, ವಿಧಾನ ಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಪಾಟೀಲ್, ಶರಣಗೌಡ ಅ. ಪಾಟೀಲ್ ಬಯ್ಯಾಪೂರ, ಮುಖಂಡರಾದ ಅಮರೇಗೌಡ ಪಾಟೀಲ ಬಯ್ಯಾಪುರ, ತುಂಗಭದ್ರಾ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹಸನಸಾಬ್ ನಬಿಸಾಬ್ ದೋಟಿಹಾಳ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾಧಿಕಾರಿ ಗಳಾದ ನಿತೀಶ್ ಕೆ., ಜಿಪಂ ಸಿಇಒ ರಾಹುಲ್ ತುಕಾರಾಂ ಪಾಂಡ್ವೆ, ರಾಯಚೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಂ.ಪುಟ್ಟಮಾದಯ್ಯ. ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪೃಥ್ವಿಕ್ ಶಂಕರ್, ಸೇರಿದಂತೆ ಇತರರು ಇದ್ದರು.

ವಿಧಾನ ಪರಿಷತ್ ಶಾಸಕರಾದ ಎ. ವಸಂತಕುಮಾರ ಅವರು ಸ್ವಾಗತಿಸಿದರು. ರಾಯಚೂರ ಸಹಾಯಕ ಆಯುಕ್ತರಾದ ಗಜಾನನ ಬಾಳೆ ಅವರು ವಂದಿಸಿದರು.

## ಮೈಕ್ರೋ ನ್ಯೂಸ್

### ಜೂ.25 ರಂದು ಮಿನಿ ಉದ್ಯೋಗ ಮೇಳ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಜೂ.25 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ನಗರದ ಹಳೆಯ ತಾಲ್ಲೂಕು ಕಚೇರಿ ಆವರಣದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಮಿನಿ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ಪಿ.ಎಸ್.ಹಟ್ಟಪ್ಪ ಅವರು ತಿಳಿಸಿದ್ದಾರೆ.

ನಗರದ ಜೊಯಾಲೂಕಸ್ ಜ್ಯೂವೆಲರಿ ಕಂಪನಿಯವರು ತಮ್ಮಲ್ಲಿರುವ ಖಾಲಿ ಹುದ್ದೆಗಳಿಗೆ ನೇರ ಸಂದರ್ಶನ ಮೂಲಕ ನೇಮಕ ಮಾಡಿಕೊಳ್ಳುವರು. 25 ವರ್ಷ ಕೆಳಗಿನ ಆಸಕ್ತ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕವಿರುವುದಿಲ್ಲ.

**ವಿದ್ಯಾರ್ಹತೆ:** ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೋಮಾ, ಪದವಿ ವಿದ್ಯಾರ್ಹತೆ ಹೊಂದಿರಬೇಕು. ಆಸಕ್ತ ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಭಾಗವಹಿಸಿ, ಇದರ ಸದುಪಯೋಗ ಪಡೆದುಕೊಳ್ಳಬೇಕು. ಪುರುಷರು ಮತ್ತು ಮಹಿಳೆಯರು ಭಾಗವಹಿಸಬಹುದು. ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ತಮ್ಮ ಆಧಾರ್ ಕಾರ್ಡ್ ಪ್ರತಿ ಮತ್ತು ಸ್ವ-ವಿವರ (ಬಯೋಡೇಟಾ) ಗಳೊಂದಿಗೆ ಅಂದು ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ಮೊ.9742718891, 9663263086, 9900827768, 6360408094 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜೂ.27 ರಂದು ಉಪವಿಭಾಗ ಮಟ್ಟದ ಜಾಗೃತಿ ಸಮಿತಿ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ಮಲಹೊರುವ ಪದ್ಧತಿ ನಿಷೇಧ ಹಾಗೂ ಪುರ್ನವಸತಿ ಕಾಯ್ದೆಯನ್ವಯ ತ್ರೈಮಾಸಿಕ ಬಳ್ಳಾರಿ ಉಪವಿಭಾಗ ಮಟ್ಟದ 2025ನೇ ಸಾಲಿನ ಎರಡನೇ ತ್ರೈಮಾಸಿಕ ಜಾಗೃತಿ ಸಮಿತಿ ಸಭೆಯನ್ನು ಜೂ.27 ರಂದು ಬೆಳಿಗ್ಗೆ 11 ಗಂಟೆಗೆ ಸಹಾಯಕ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ ಎಂದು ಉಪವಿಭಾಗ ಮಟ್ಟದ ಜಾಗೃತಿ ಸಮಿತಿಯ ಅಧ್ಯಕ್ಷರು ಆದ ಸಹಾಯಕ ಆಯುಕ್ತರು ತಿಳಿಸಿದ್ದಾರೆ.

EVENT
Media
Coverage
Call us
94486 33038

# ಆರ್ಯವೈಶ್ಯ ಅಭಿವೃದ್ಧಿ ನಿಗಮ: ಸಾಲ ಸೌಲಭ್ಯಗಳಿಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ:**

ಕರ್ನಾಟಕ ಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮ ವತಿಯಿಂದ 2025-26ನೇ ಸಾಲಿಗೆ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳಡಿ ಸಹಾಯಧನ ಮತ್ತು ಸಾಲ-ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

**ಅರ್ಹತೆ:** ನಿಗಮದ ಯೋಜನೆಗಳಲ್ಲಿ ಸೌಲಭ್ಯಗಳನ್ನು ಪಡೆಯಲು ಸಾಮಾನ್ಯ ವರ್ಗದ ಆರ್ಯವೈಶ್ಯ ಸಮುದಾಯಕ್ಕೆ ಸೇರಿರಬೇಕು ಮತ್ತು ನಮೂನೆ-ಜಿ ಯಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರವಿರಬೇಕು.

ಅರ್ಜಿ ಸಲ್ಲಿಸುವಾಗ ಅರ್ಜಿದಾರರು ತಮ್ಮ ಮೊಬೈಲ್ ಸಂಖ್ಯೆ ಹಾಗೂ ಬ್ಯಾಂಕ್ ಖಾತೆಯನ್ನು ತಮ್ಮ ಆಧಾರ್ ಸಂಖ್ಯೆಗೆ ಜೋಡಣೆ ಮಾಡಿರಬೇಕು. ಅರ್ಹ ಅರ್ಜಿದಾರರನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆ ಯಲ್ಲಿ ರಚಿಸಿರುವ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾಗುತ್ತದೆ.

2019-20 ಹಾಗೂ 2021-22ನೇ ಸಾಲಿನಲ್ಲಿ ಸ್ವಯಂ-ಉದ್ಯೋಗ ನೇರಸಾಲ ಯೋಜನೆಯಡಿ ಸಾಲ ಪಡೆದು ಸಕಾಲದಲ್ಲಿ ಪೂರ್ಣ ಪ್ರಮಾಣದಲ್ಲಿ ಮರುಪಾವತಿಸಿದ ಫಲಾನುಭವಿಗಳಿಗೆ ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

**ಯೋಜನೆಗಳ ವಿವರ:** ಸ್ವಯಂ ಉದ್ಯೋಗ ಸಾಲ ಯೋಜನೆ, ಆರ್ಯವೈಶ್ಯ ಆಹಾರ ವಾಹಿನಿ ಯೋಜನೆ (ಬ್ಯಾಂಕುಗಳ ಸಹಯೋಗದೊಂದಿಗೆ), ವಾಸವಿ ಜಲಶಕ್ತಿ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ (ಸಿಇಟಿ ಹಾಗೂ ನೀಟ್ ಕೌನ್ಸಲಿಂಗ್ ಮುಗಿದ ನಂತರ ಅರ್ಜಿ ಆಹ್ವಾನಿಸಲಾಗುವುದು).

ಅರ್ಜಿಗಳನ್ನು ಆನ್‌ಲೈನ್ ವೆಬ್‌ಸೈಟ್ http://kacdc.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜು.31 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನ ಕಚೇರಿಯ ಎರಡನೇ ಮಹಡಿಯ ಬಿ ಬ್ಲಾಕ್ ನ ಆರ್ಯವೈಶ್ಯ ಅಭಿವೃದ್ಧಿ ನಿಗಮ ಕಚೇರಿ ಅಥವಾ ಸಹಾಯವಾಣಿ ಸಂಖ್ಯೆ 9448451111 ಗೆ ಸಂಪರ್ಕಿಸಬಹುದು ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕ ಟಿ.ಹೊನ್ನುರಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಅರ್ಹ ವಿದ್ಯಾರ್ಥಿಗಳಿಂದ ಈಗಾಗಲೇ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಜೂ.30 ರ ವರೆಗೆ ವಿಸ್ತರಿಸಲಾಗಿದೆ. ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 2ಬಿ, 3ಎ, 3ಬಿ ಮತ್ತು ಪರಿಶಿಷ್ಟ ಜಾತಿ-ಪರಿಶಿಷ್ಟ ವರ್ಗದ ಪಿಯುಸಿ, ಐಟಿಐ ಮತ್ತು ಡಿಪ್ಲೋಮೋ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು https://shp.karnataka.gov.in ಗೆ ಭೇಟಿ ನೀಡಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು.

ತಾಲ್ಲೂಕುವಾರು ವಿದ್ಯಾರ್ಥಿ ನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in ನ್ನು ನೋಡಬಹುದು.

ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ ಸಹಾಯವಾಣಿ ಸಂಖ್ಯೆ 8050370006 ಅಥವಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಮತ್ತು ತಾಲ್ಲೂಕು ಅಧಿಕಾರಿಗಳ ಕಚೇರಿಗೆ ಅಗತ್ಯ ದಾಖಲೆಗಳೊಂದಿಗೆ ಭೇಟಿ ನೀಡಿ ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

14 ಭಾಷೆಗಳಲ್ಲಿ ಸುದ್ದಿ
ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗಾಗಿ ಭೇಟಿ ನೀಡಿ
www.hampitimes.com